ಅಪರಂಜಿ

ಸೆಪ್ಟೆಂಬರ್ 2000

ತಿಳಿನಗೆಯ ಕಾರಂಜಿ



ಪ್ರಕಾಶ್

ರಾಮಿ

ಹೆಚ್. ಗೋಪಾಲಕೃಷ್ಣ

ಹೆಚ್.ಕೆ. ರಾಮಚಂದ್ರಮೂರ್ತಿ

ಹಾ.ರಾ.

ನಾಗೂಶ್ರೀ ಸೂರಿ

ಗೌತಮ

ಧೃತಿ

ಕು.ಗೋ.

ಕಮಲಾ ರಾಮಸ್ವಾಮಿ

ಎಂ.ಎಸ್.ಕೆ.

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email. aparanji@hotmail.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 17 ಸೆಪ್ಟೆಂಬರ್- 2000 ಸಂಚಿಕೆ - 12

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ ಪ್ರಕಾಶ್

ಒಂದು ಕೋಳಿ ಲಂಚವಾಗಿ ಸ್ವೀಕರಿಸಿದ ಅಧಿಕಾರಿಗೆ 15 ಸಾವಿರ ರೂ. ಜುಲ್ಮಾನೆ

- ಸುದ್ದಿ

'ಕೋಳಿ ಕಳ್ಳ' ಅಂದರೆ ಅರ್ಥವಾಗುತ್ತೆ ಈಗ!!

★★★

ಧರ್ಮ ನಿಂದನೆಗಾಗಿ ಮರಣದಂಡನೆ

- ಇಸ್ಲಮಾಬಾದ್ ಸುದ್ದಿ

ಪರಮಾತ್ಮ ಕಣ್ಣೀರು ಸುರಿಸಿದನಂತೆ!!

★★★

ಆದಾಯ ತೆರಿಗೆ ಧಾಳಿ ಸುದ್ದಿಗಳು ಕ್ರೀಡಾ ಪುಟದಲ್ಲಿ ಬರುವ ಕಾಲ ಬಂತಲ್ಲ ಎಂದು ಅಪರಂಜಿ ಮರುಗಿದಳಂತೆ!!

★★★

ಕ್ರೀಡಾಪ್ರಿಯ ಶಾಲಾ ಮಕ್ಕಳೆಲ್ಲ 'ವೀರಪ್ಪನ್‌ಕೀ ಜೈ' ಎಂದು ಮನಸ್ಸಿನಲ್ಲೇ ಕೂಗುತ್ತಿದ್ದಾರಂತೆ!!

★★★

"ಕೌನ್ ಬನೇಗಾ ಕ್ರೋರ್‌ಪತಿ?"

ಅಷ್ಟೂ ಗೊತ್ತಿಲ್ವೆ, ಅಮಿತಾಭ್!!

★★★

ಬ್ರಿಟಿಷರೇ ತೊಲಗಿ ಚಳುವಳಿ ದಿನಾಚರಣೆ

- ಸುದ್ದಿ

ಎಲ್ಲಿ ಗೊತ್ತೆ? ಕೋಲ್ಸ್ ಪಾರ್ಕ್‌ನಲ್ಲಿ!!

★★★

ಹಣ ದುರುಪಯೋಗ ಮಾಡಿದ ಬ್ಲೇಡ್ ಕಂಪೆನಿಗಳ ವಿರುದ್ಧ ಕ್ರಮ

- ಪತ್ರಿಕೆ

ಈ ರೀತಿಯ ಕ್ಷೌರ ತೀರ ತಪ್ಪು!!

★★★

ಭಾರತದ ಮೊದಲ ಎದುರಾಳಿ ಶ್ರೀಲಂಕಾ

- ಸುದ್ದಿ

ಹೆದರಬೇಡಿ, ಕ್ರೀಡಾಸುದ್ದಿ ಅಷ್ಟೇ!!

★★★

ಸುಳ್ಳು ಪ್ರಮಾಣಪತ್ರ ಸಲ್ಲಿಸುವವರ ವಿರುದ್ಧ ಕ್ರಮ; ಹೈಕೋರ್ಟ್ ಹೊಸ ಸಂಪ್ರದಾಯ

- ಸುದ್ದಿ

ಇದು 'ಹೊಸ' ಸಂಪ್ರದಾಯ ಆಗಿದ್ದು ವಿಷಾದಕರ!

★★★



''ಬೇಕಾದಷ್ಟು ಪೂಜೆ ಸಂದಿದೆ. ಹಬ್ಬಕ್ಕಾದರೂ ಬಿಡುಗಡೆ ಮಾಡಿಸಿ''

ನಮ್ಮ ನಿಮ್ಮಲ್ಲಿ

"ಮೂರು ಬ್ಯಾಗ್‌ಗಳನ್ನೂ ಬೂಟ್‌ನಲ್ಲಿ ಇಟ್ಟಿದ್ದೇನೆ. ಒಮ್ಮೆ ನೋಡಿಕೊಂಡುಬಿಡಿ. ಆಮೇಲೆ ಏರ್ ಪೋರ್ಟ್‌ನಲ್ಲಿ ಪೇಚಾಡುವ ಹಾಗಾಗಬಾರದಲ್ಲಾ" ಎನ್ನುತ್ತಾ ಕಿಂಡರ್ ಬೂಟಿನ ಮೇಲ್ಮುಚ್ಚಳ ತೆಗೆದ. ವಿಶಾಲವಾದ ಬೂಟಿನ ಜಾಗದಲ್ಲಿ ನಮ್ಮ ಸೂಟ್‌ಕೇಸ್ ಮತ್ತು ಎರಡು ಹ್ಯಾಂಡ್ ಬ್ಯಾಗ್‌ಗಳು ಒಂದು ಮೂಲೆಯಲ್ಲಿ ಕೂತಿದ್ದವು. ಕಾರನ್ನು ಬಳಸಿ ಮುಂದೆ ಬಂದು ನಾನು ಕಿಂಡರ್ ಪಕ್ಕದಲ್ಲಿ ಕುಳಿತೆ. ಮಂಗಳೆ ಮೊದಲೇ ಟ್ಯಾಕ್ಸಿ ಏರಿ ಹಿಂದೆ ಕುಳಿತಿದ್ದಳು. ಟ್ಯಾಕ್ಸಿ ಭರದಿಂದ ಹೀಥ್ರೋ ಕಡೆಗೆ ಧಾವಿಸಿತು. ಆರು ವಾರಗಳ ಕಾಲ ಸಸ್ಯ ಶ್ಯಾಮಲೆ ಬ್ರಿಟಾನ್ಯಳ ಆದರದ ಆತಿಥ್ಯವನ್ನನುಭವಿಸಿ, ಸರೋವರಗಳ ನಾಡಾದ ಕಂಬ್ರಿಯಾ, ಸ್ಕಾಟಿಷ್ ಹೈಲ್ಯಾಂಡ್ಸ್‌ನ ದೈತ್ಯಾಕಾರದ ಬೆಟ್ಟಗುಡ್ಡಗಳ ರೌದ್ರರಮಣೀಯತೆ, ಬಂಧು ಮಿತ್ರರ ಸಖ್ಯಸೌಖ್ಯ ಇವನ್ನೆಲ್ಲಾ ಸವಿದು ಈಗ ಮನ ಮನೆಯಕಡೆ ತಿರುಗಿತ್ತು. ಹೀಥ್ರೋ-ದುಬೈ, ದುಬೈ-ಮುಂಬೈ, ಮುಂಬೈ-ಬೆಂಗಳೂರು, ಹೀಗೆ ಮೂರು ಹಂತಗಳ ಪಯಣ ನಮ್ಮದು. (ಆಗಸ್ಟ್ ಒಂದರಂದು ಬೆಂಗಳೂರು ಸೇರಿದ ಮೇಲೆ, ಏರ್ಪೋರ್ಟ್-ಮನೆ ಎಂಬ ನಾಲ್ಕನೆಯ ಹಂತ ಮಿಕ್ಕೆಲ್ಲವುಗಳಿಗಿಂತ ದುಸ್ಸಾಧ್ಯವಾಗುವುದೆಂಬ ಭವಿಷ್ಯದ ಅರಿವು, ಸುದೈವದಿಂದ ಆಗ ನಮಗೆ ಇರಲಿಲ್ಲ.) ಒಂದೂ ಮುಕ್ಕಾಲು ಗಂಟೆಗೆ ಹೊರಡಲಿದ್ದ ಇಂಟರ್ ನ್ಯಾಷನಲ್ ವಿಮಾನಯಾನಕ್ಕೆ, ಹತ್ತು ಘಂಟೆಯ ಹೊತ್ತಿಗಾದರೂ ಹೀಥ್ರೋದಲ್ಲಿದ್ದರೆ ವಾಸಿ ಎಂದುಕೊಂಡು ಎಂಟು ಘಂಟೆಗೇ ನಾವು ಟ್ಯಾಕ್ಸಿ ಹತ್ತಿದ್ದೆವು (ನಾನು ಶಾಲೆಗೆ ಕಸ ಗುಡಿಸೋ ಹೊತ್ತಿಗೆ ಹೋಗುತ್ತಿದ್ದ ಆಸಾಮಿ). ನಾವಿದ್ದ ಕಡೆಯಿಂದ ಏರ್ಪೋರ್ಟ್‌ಗೆ ಸಾಮಾನ್ಯವಾಗಿ ಒಂದು ಘಂಟೆಯ ಪಯಣವಾದರೂ, ಒಮ್ಮೊಮ್ಮೆ ಟ್ರಾಫಿಕ್ ಜಾಮ್ ಆದರೆ ತಾಸುಗಟ್ಟಲೆ ಕಾಯಬೇಕಾಗುತ್ತದೆ ಅಂತ ಯಾರೋ ಹೆದರಿಸಿಬಿಟ್ಟಿದ್ದರು ಬೇರೆ. ಗಡಿಯಾರ ನೋಡಿಕೊಂಡೆ. ಎಂಟೂವರೆ. ನಮ್ಮ ಟ್ಯಾಕ್ಸಿ ಘಂಟೆಗೆ ನೂರಿಪ್ಪತ್ತು ಕಿಲೋಮೀಟರ್ ವೇಗದಲ್ಲಿ ಮೋಟರ್ ವೇ ಮೇಲೆ ಓಡುತ್ತಿತ್ತು.

ಈ ದೇಶದಲ್ಲಿ ಮೋಟರ್ ವೇ ಗಳಲ್ಲಿ ಪಯಣಿಸುವುದೇ ಒಂದು ಮೋಜು. ಇವು ನಮ್ಮ ನಾಡಿನ ಹೈವೇಗಳಂತಲ್ಲ. ಯಾವುದೂ ಅಡ್ಡರಸ್ತೆ ಇರದ, ರಸ್ತೆ ಪಕ್ಕದ ಹೊಲ ತೋಟಗಳಿಂದ ಯಾವ ಪ್ರಾಣಿಯೂ ಅಕಸ್ಮಾತ್ತಾಗಿ ಹಾದು ಬರದ ಹಾಗೆ ನೂರಾರು ಮೈಲಿಗಳಷ್ಟು ಇಕ್ಕೆಲಗಳಲ್ಲೂ ಕಬ್ಬಿಣದ ಬೇಲಿ ಹಾಕಿರುವಂತಹ ರಾಜಮಾರ್ಗಗಳಿವು. ಹೋಗುವ, ಬರುವ ಎರಡು ದಿಕ್ಕುಗಳಲ್ಲೂ ಮೂರು ಮೂರು ಲೇನ್‌ಗಳಲ್ಲಿ ಗಂಟೆಗೆ ನೂರಿಪ್ಪತ್ತು ಕಿ.ಮೀ.

ವೇಗದಲ್ಲಿ ಭರ್ರ್ರೋ ಎಂದು ದೌಡಾಯಿಸುತ್ತಿರುವ ಕಾರು, ಬಸ್ಸು, ಲಾರಿಗಳನ್ನು ನೋಡುವುದೇ ಒಂದು ವಿಶಿಷ್ಟ ಅನುಭವ. ಈ ರಸ್ತೆಗಳಲ್ಲಿ ಎಲ್ಲಿಯೂ ವಾಹನಗಳನ್ನು ನಿಲ್ಲಿಸಲಾಗದು. ತೀರ ಎಮರ್ಜೆನ್ಸಿ ಆದರೆ ರಸ್ತೆಯ ಎಡ ಪಕ್ಕದ ಹಾರ್ಡ್ ಷೋಲ್ಡರ್ ಎಂಬ ಲೇನ್‌ನಲ್ಲಿ ಕಾರು ನಿಲ್ಲಿಸಿ ಹಾದಿಯ ಬದಿಯಲ್ಲಿನ ಫೋನ್ ಮೂಲಕ ಸಹಾಯ ಪಡೆಯಬಹುದು. ನೀವು ಮೋಟರ್ ವೇ ಹಿಡಿದು ಯಾವುದಾದರೊಂದು ಜಾಗಕ್ಕೆ ಹೋಗಬೇಕಾದರೆ, ಮೋಟರ್ ವೇನ ಯಾವ ಹೊರದಾರಿಯಿಂದ ಆ ಊರಿಗೆ ಸಂಪರ್ಕವಿದೆ ಎಂಬುದನ್ನು ಖಚಿತ ಪಡಿಸಿಕೊಂಡ ನಂತರವೇ ಪಯಣ ಪ್ರಾರಂಭ. ಊರಿಗೆ ಹತ್ತು ಹದಿನೈದು ಮೈಲಿಗಳಿರುವಾಗಲೇ ರಸ್ತೆ ಬದಿಗಿನ ಫಲಕಗಳನ್ನು ಜಾಗರೂಕತೆಯಿಂದ ನೋಡುತ್ತಾ ನಿಮ್ಮ ಊರಿನ ಹೊರದಾರಿ ಕಂಡ ತಕ್ಷಣ ಆ ಲೇನ್‌ನಲ್ಲಿ ಸರಿದು ರಾಜಮಾರ್ಗದಿಂದ ಹೊರಬರಬಹುದು. ಸ್ವಲ್ಪ ಅಜ್ಞಾನದಿಂದ ಆ ಲೇನ್ ಸೇರುವುದು ಮರೆತರೆ ಪುನಃ ಮುಂದಿನ ಊರಿನವರೆಗೂ ನಿಮಗೆ ಮೋಟರ್ ವೇ ನಲ್ಲಿಯೇ ಬಂಧನ. ಹೀಗೆ ಹಾದಿ ತಪ್ಪಿ ನೂರಾರು ಮೈಲಿ ಎಲ್ಲೆಲ್ಲೋ ಓಡಾಡಿ ಊರು ಸೇರಿದವರಿದ್ದಾರೆ. ಕೊಂಕಣ ಸುತ್ತಿ ಮೈಲಾರಕ್ಕೆ ಎಂಬ ಗಾದೆ ಇಲ್ಲೇ ಹುಟ್ಟಿಕೊಂಡಿದ್ದೇನೋ. ಇಡೀ ಬ್ರಿಟನ್ನನ್ನು ಇಂತಹ ಮೋಟರ್ ವೇಗಳ ಜಾಲ ಆವರಿಸಿದೆ. ಒಂದು ನಾಡಿನ ಆರ್ಥಿಕ ಪ್ರಗತಿಗೆ ಇಂತಹ ಸಂಪರ್ಕಸಾಧನ ಎಷ್ಟು ಆಗತ್ಯ ಎಂಬ ವಿಷಯ ಕುರಿತು ಹಲವು ದಿನಗಳ ಹಿಂದೆ ನನ್ನ ಅಳಿಯ ವಿಜಯ್‌ನೊಂದಿಗೆ ಮಾತನಾಡುತ್ತಿದ್ದೆ. ''ನಮ್ಮ ದೇಶದಲ್ಲೂ ಈ ರೀತಿಯ ಮೋಟರ್ ವೇ ನಿರ್ಮಿಸಿದರೆ ಸರಕು ಸಾಗಣೆ ಎಷ್ಟು ಸುಲಭವಾಗುತ್ತೆ. ಶುರುವಿಗೆ ದೆಹಲಿಯಿಂದ ಮುಂಬೈಗೆ ಒಂದು ಇಂತಹ ರಾಜಮಾರ್ಗ ನಿರ್ಮಿಸಬಾರದೇ'' ಅಂದೆ. ವಿಜಯ್ ''ನೀವು ಹೇಳೋದೇನೋ ಸರಿ. ಆದರೆ ನಮ್ಮ ನಾಡಿನಲ್ಲಿ ಒಂದು ತೊಂದರೆ ಇದೆ. ಆಮರಣಾಂತ ಉಪವಾಸ, ಧರಣಿ ಮಾಡಬೇಕೆನ್ನೋ ರಾಜಕೀಯ ಗುಂಪುಗಳಿಗೆ, ಸರ್ಕಾರವನ್ನು ಕುತ್ತಿಗೆ ಹಿಡಿದು ಸ್ಥಗಿತಗೊಳಿಸಲು, ಹೇಳಿ ಮಾಡಿಸಿದಂತಹ ರಸ್ತೆಗಳಿವು. ಒಂದು ನೂರು ಜನ, ಹತ್ತು ಸಾಧುಗಳು, ಎರಡು ಗೋಮಾತೆಯರು ರಸ್ತೆ ಮಧ್ಯೆ ನಿಂತರೆ ಸಾಕು, ಒಂದು ನೂರು ಮೈಲಿ ಉದ್ದದ ವಾಹನಗಳ ಕ್ಯೂ ಒಂದೆರಡು ಘಂಟೆಗಳಲ್ಲಿ ಬೆಳೆಯುತ್ತೆ. ಈಗಿನ ವ್ಯವಸ್ಥೆಯೇ ವಾಸಿ, ಟ್ರಾಫಿಕ್ ಜಾಮ್ ಆದರೆ ಗದ್ದೆ, ಹೊಲ ದಾಟಿ ಬಚಾವಾಗಬಹುದು'' ಅಂದ.

ಎಂಟೂಮುಕ್ಕಾಲು. ನಮ್ಮ ಟ್ಯಾಕ್ಸಿ ಚಾಲಕ ಕಿಂಡರ್, ಸುಮಾರು ಇಪ್ಪತ್ತೈದು ವರ್ಷದ ಸ್ಫುರದ್ರೂಪಿ ಯುವಕ. ಹನ್ನೆರಡು ವರ್ಷದವನಿದ್ದಾಗ ಇಥಿಯೋಪಿಯಾದಿಂದ ಇಲ್ಲಿಗೆ ವಲಸೆ ಬಂದವನಂತೆ. ತಾಯಿ, ತಂಗಿ, ಅಣ್ಣ

ಇವರೊಂದಿಗೆ ವಾಸ. ''ಆರು ಟ್ಯಾಕ್ಸಿ ಇಟ್ಟಿದ್ದೇವೆ. ಮನೆಯವರೆಲ್ಲಾ ಸೇರಿ ಸಂಸ್ಥೆ ನಡೆಸುತ್ತಿದ್ದೇವೆ. ಜೀವನಕ್ಕೇನು ತೊಂದರೆಯಿಲ್ಲ'' ಅಂತ ಕಿಂಡರ್. ''ಏನು ಓದಿದ್ದೀಯಾ'' ಅಂತ ಕೇಳಿದೆ. ''ಕಳೆದ ವರ್ಷ ನಾನು ಮೆಕ್ಯಾನಿಕಲ್ ಇಂಜನಿಯರಿಂಗ್ ಓದಿ ಮುಗಿಸಿದೆ. ಎಲ್ಲು ಕೆಲಸ ಸಿಗದಿದ್ದುದರಿಂದ ಈ ವೃತ್ತಿ ಹಿಡಿಯಬೇಕಾಯಿತು. ಈಗಿನ ದಿನಗಳಲ್ಲಿ ಎಲ್ಲಿ ಕೇಳಿದರೂ ಸಾಫ್ಟ್‌ವೇರ್ ಗೊತ್ತಾ ಅಂತ ಕೇಳ್ತಾರೆ. ಅದಕ್ಕೇ ನನ್ನ ಸ್ನೇಹಿತೆ ಈಗ ಐ.ಟಿ. ಕ್ಷೇತ್ರದಲ್ಲಿ ಕೆಲಸ ಮಾಡ್ತಿರೋದು''. ಕಿಂಡರ್‌ನ ಮಾತುಗಳು ಬೆಂಗಳೂರಿನ ಅನೇಕ ಪದವೀಧರ ಆಟೋ ಡ್ರೈವರುಗಳ ಮಾತುಗಳನ್ನು ಪ್ರತಿಧ್ವನಿಸುವಂತಿತ್ತು.

''ಇಥಿಯೋಪಿಯಾದಲ್ಲಿನ ಜೀವನಕ್ಕೂ ಇಲ್ಲಿಗೂ ಹೋಲಿಕೆ ಹೇಗೆ?'' ನನ್ನ ಸಹಜ ಪ್ರಶ್ನೆ.

''ಜೀವನ ಅಂದರೆ ಇಥಿಯೋಪಿಯಾದಲ್ಲಿ. ಇಲ್ಲಿ ಕೇವಲ ಪ್ರಾಣಧಾರಣ. (ಸರ್ವೈವಲ್) ಸಂತಸವೆಂದರೆ ನಾವು ಕಾನೂನಿನ ಚೌಕಟ್ಟಿನಲ್ಲಿ ವೃತ್ತಿ ನಡೆಸಿದರೆ, ಇಲ್ಲಿನ ಜನ ನಮ್ಮನ್ನು ಬದುಕಲು ಬಿಡುತ್ತಾರೆ. ಅಲ್ಲಿ, ನಮ್ಮ ದೇಶದಲ್ಲಿ ಜನಗಳದ್ದು ಎರಡು ಗುಂಪು. ಒಂದು ಗುಂಪು ಬರೀ ಮಾತನಾಡುವ ಜನ. ಇನ್ನೊಂದು ಗುಂಪು ಕೆಲಸ ಮಾಡುವವರು. ಕೆಲಸ ಮಾಡೋರು ಮಾತನಾಡೋ ಎಲ್ಲರ ಬಾಯಿಗಳಿಗೂ ಏನಾದರೂ ತುಂಬಿಸಿ ಬಾಯಿ ಮುಚ್ಚಿಸಬೇಕು. ಇಲ್ಲವೆಂದರೆ ಮಾತನಾಡೋರು ನಮ್ಮನ್ನ ಕೆಲಸ ಮಾಡಲು ಬಿಡೋದೇ ಇಲ್ಲ. ನಾವು ಸಂಪಾದಿಸಿದ್ದೆಲ್ಲಾ ಮಾತನಾಡೋರ ಬಾಯಿ ತುಂಬಲೇ ಸಾಕಾಗದಾಗ ಹೀಗೆ ಪರದೇಶಿಯಾಗಿ ಜೀವನ ನೂಕಬೇಕಾಗುತ್ತೆ.'' ಕಿಂಡರ್‌ನ ಉತ್ತರ ಯಾವುದೋ ವಿಚಿತ್ರ ಕಾರಣಕ್ಕೆ ನನಗೆ ಅತ್ಯಂತ ಪರಿಚಿತವಾದ ಸನ್ನಿವೇಶದ ವಿವರಣೆಯಂತೆ ತೋರಿತು.

''ಈ ದೇಶದಲ್ಲಿ ವರ್ಣಭೇದದ ಸಮಸ್ಯೆಗಳನ್ನು ನೀನು ಇದುರಿಸಬೇಕಾಗಿದೆಯೇನು?''

ಕಿಂಡರ್ ಜೋರಾಗಿ ನಕ್ಕ. ''ಈ ಬೃಹತ್ ಲಂಡನ್ ಒಂದು ನಗರ ಅಲ್ಲ. ಬಿಳಿಯರದೇ ಒಂದು ನಗರ. ಕಪ್ಪು ಜನಗಳದ್ದೇ ಒಂದು ಬೇರೆ ಪಟ್ಟಣ. ಇನ್ನು ನಿಮ್ಮ ಬಾಂಧವರೋ, ಯಾರನ್ನೂ ಸೇರಿಸದ ಅವರದ್ದೇ ಆದ ಮಿನಿ ಇಂಡಿಯಾದಲ್ಲಿ ಆಶ್ರಯ ಪಡೆದಿರುವ ಜನ. ಪರಸ್ಪರ ಸಂಪರ್ಕವೇ ಇಲ್ಲದ ವಿವಿಧ ಜಗತ್ತುಗಳ ನಡುವೆ ವರ್ಣಭೇದ ಹೇಗೆ ಸಾಧ್ಯ?''

ಒಂಭತ್ತೂ ಕಾಲು. ಮೋಟರ್ ವೇ ಮೇಲೆ ತೂಗು ಹಾಕಿದ್ದ ಅಡ್ಡ ಫಲಕದ ಮೇಲೆ ಹೀಥ್ರೋ ಟರ್ಮಿನಲ್ ಥ್ರೀಗೆ ದಾರಿ ಎಂಬ ಸೂಚನೆ ಇತ್ತು. ಟರ್ಮಿನಲ್

ಮುಂಭಾಗದಲ್ಲಿ ಟ್ಯಾಕ್ಸಿ ನಿಂತಿತು. ಪೆಟ್ಟಿಗೆಗಳನ್ನು ಇಳಿಸಿಕೊಂಡು, ಕಿಂಡರ್‌ಗೆ ವಿದಾಯ ಹೇಳಿ ಟ್ರಾಲಿ ನೂಕಿಕೊಂಡು ಟರ್ಮಿನಲ್ ಒಳಕ್ಕೆ ಹೋದೆವು. ನಮ್ಮ ಚೆಕ್ ಇನ್ ಕೌಂಟರ್ ಇನ್ನೂ ತೆರೆದಿರಲಿಲ್ಲ. ಕಾದು ಕುಳಿತಿದ್ದಾಗ ಒಮ್ಮೆಲೇ ಏರ್ ಪೋರ್ಟ್‌ನ ಧ್ವನಿವರ್ಧಕದಲ್ಲಿ ನನ್ನ ಹೆಸರು ಕೇಳಿಬಂತು. ಮೊದಲ ಬಾರಿ ಸರಿಯಾಗಿ ಕೇಳಿಸಲಿಲ್ಲ. ಎರಡನೇ ಬಾರಿ ಕೇಳಿಸಿಕೊಂಡಾಗ ''ಷೀವಕೂಮರ್ ಟ್ರಾವೆಲಿಂಗ್ ಟು ದುಬೈ ಬೈ ಫ್ಲೈಟ್ ಇಕೆ ಒನ್ ಪ್ಲೀಸ್ ಕಾಂಟಾಕ್ಟ್ ಇನ್‌ಫರ್‌ಮೇಷನ್ ಡೆಸ್ಕ್ ಫಾರ್ ಎ ಮೆಸೇಜ್'' ಅಂತ ಹೇಳುತ್ತಿದ್ದರು. ನನಗೋ ಮೊದಲೇ ಗಾಬರಿ. ಅವರು ಹೇಳಿದ ಜಾಗಕ್ಕೆ ಓಡಿದೆ. ಡೆಸ್ಕ್ ನಲ್ಲಿದ್ದ ಚೆಂದುಳ್ಳಿ ತರುಣಿ ನನ್ನ ಕೈಗೆ ಮೆಸೇಜ್ ಒಂದನ್ನು ನೀಡಿದಳು. "Have a safe journey" ಎಂದು ತಂಗಿ ಬಾರ್ಬರಾ ಕಳುಹಿಸಿದ್ದ ಸಂದೇಶವಾಗಿತ್ತು ಅದು. ಎರಡು ದಿನಗಳ ಹಿಂದೆ ನಾನು, ಮಂಗಳೆಯೊಡಗೂಡಿ ಇಪ್ಸ್ವಿಚ್‌ನಲ್ಲಿದ್ದ ಬಾರ್ಬರಾಳ ಮನೆಗೆ ಹೋಗಿದ್ದೆವು. ಮೂವತ್ತು ವರ್ಷಗಳಷ್ಟು ಹಳೆಯ ಗೆಳೆತನ ನಮ್ಮದು. ಮನೆಯ ಹೊಸ್ತಿಲಿನಲ್ಲಿ ನಾನು ನಿಂತಾಗ ಬಾರ್ಬರಾ ನನ್ನ ಎರಡು ಕೆನ್ನೆಗಳಿಗೂ ಮುತ್ತಿಟ್ಟು ಸ್ವಾಗತಿಸಿದ್ದು. ಪೀಟರ್, ಅಲ್ಲಿನ ರೂಢಿಯಂತೆ ಮಂಗಳೆಗೆ ಮುತ್ತಿಟ್ಟಾಗ ಅವಳು ನಾಚಿ ನೀರಾದದ್ದು, ಅವರ ಮನೆಯಲ್ಲಿ ನಮಗೆ ಸಿಕ್ಕ ಭಾರತೀಯ ಅಡುಗೆ, ಸರಿರಾತ್ರೆಯವರೆಗೂ ನಾವುಗಳು ಅವರೊಂದಿಗೆ ಕೊಚ್ಚಿದ ಹರಟೆ, ಇವೆಲ್ಲದರ ನೆನಪಿನ ಸುರುಳಿ ಮನಃಪಟಲದಲ್ಲಿ ಮೂಡಲು ಪ್ರಾರಂಭಿಸಿತು. ಬರಹ ಈಗಾಗಲೇ ಉದ್ದವಾಗಿರುವುದರಿಂದ ಈ ಎಲ್ಲ ಅನುಭವಗಳನ್ನು ಕುರಿತು ಮುಂದಿನ ಸಂಚಿಕೆಯಲ್ಲಿ ಬರೆಯುವೆ. ಮುಗಿಸುವ ಮುನ್ನ ನಾಲ್ಕನೆಯ ಹಂತದ ಯಾತ್ರೆಯ ಬಗ್ಗೆ ಎರಡು ಮಾತು. ಆಗಸ್ಟ್ ಒಂದರಂದು ಸಂಜೆ ಬೆಂಗಳೂರಿನಲ್ಲಿಳಿದಾಗ ಸಂಜೆ ಐದೂವರೆ. ದುಬೈನಲ್ಲೇ ನಮಗೆ ವಿಷಯ ತಿಳಿದಿತ್ತು. ಆತಂಕದಿಂದಲೇ ಬೆಂಗಳೂರಿನಲ್ಲಿ ಇಳಿದೆವು. ಟ್ಯಾಕ್ಸಿಗಳು ಯಾವೂ ಕಾಣಲಿಲ್ಲ. ಪುಣ್ಯಕ್ಕೆ ನನ್ನ ತಮ್ಮ ತನ್ನ ಮಿತ್ರನ ಕಾರೊಂದನ್ನು ತೆಗೆದುಕೊಂಡು ಬಂದಿದ್ದ. ಏನೂ ತೊಂದರೆ ಇಲ್ಲವೇನೋ? ಅಂತ ನಾನು ಕೇಳಿದೆ. ಪಾಪ ಅವನೇನು ಹೇಳೀಯಾನು. ''ಕೈಲಿ ಸ್ಟೆಥಾಸ್ಕೋಪ್ ಇದೆ. ಮುಂದಿನ ಸೀಟ್‌ನಲ್ಲಿ ಕುಳಿತು ಇದನ್ನ ಎಲ್ಲರಿಗೂ ಕಾಣುವ ಹಾಗೆ ಹಿಡಿದಿರುತ್ತೇನೆ'' ಅಂತ ಆಶ್ವಾಸನೆ ನೀಡಿದ. ಗಾಯತ್ರಿ ಜಪ ಮಾಡುತ್ತಾ ಮನೆ ಸೇರಿದೆವು. ಲ್ಯಾಂಡಿಂಗ್ ವಿತ್ ಎ ಥಡ್ ಎನ್ನುವ ಮಾತಿನ ಅರ್ಥ ಅಂದು ಸ್ಪಷ್ಟವಾಯಿತು.

ಛಾವ್.... (ಲಂಡನ್ನಿನಲ್ಲಿ ಬೈ ಅನ್ನೋದಕ್ಕೆ ಹೀಗೆ ಹೇಳ್ತಿದ್ದರು)

- ಶಿವಕುಮಾರ್

ಮಾರ್ದನಿ

(ಕನಸಿನಲ್ಲಿ)

– ರಾಮಿ

ಎನಿತು ದಿನ ಈ ಪದವಿ ಎನಗಿರುವುದು?
ಜೀವವಿರುವನಕವೊ, ಕಿರಿದು ಕಾಲವೆಯೊ?
- ಕಿರಿದು ಕಾಲವೆಯೋ

ಬಳಿಕ ಉನ್ನತ ಸ್ಥಾನ ಆವುದೆನಗೆ?
ಕೇಂದ್ರದಲೊ ರಾಜ್ಯದಲೊ ಆವುದಿರದೋ?
- ಆವುದಿರದೋ

ಎನ್ನ ದಬ್ಬುವರಾರು ಪೀಠದಿಂದ?
ಪಾರ್ಟಿಯೋ ಸೀ ಎಮ್ಮೊ ಎಲ್ಲರೂನೋ?
- ಎಲ್ಲರೂನೋ


ರಾಯಭಾರಿಯ ಪೋಸ್ಟು ಸಿಗಲಾರದೋ?
ಅಮೆರಿಕದಿ ಆಫ್ರಿಕದಿ ಯುಟೋಪ್ಯದಲ್ಲಿ
- ಯುಟೋಪ್ಯದಲ್ಲಿ

ಎನ್ನ ಸ್ಥಾನಕ್ಕಾಗ ಬರುವರಾರು?
ಬಹುಕಾಲ ನಿಲುವವರೊ ನಾಲ್ಕು ದಿನದವರೋ?
- ನಾಲ್ಕು ದಿನದವರೋ

ಮರೆಯುವುದು ಲೋಕವಿದು ನಮ್ಮನೆಂದು।
ವರುಷಗಳ ಮೇಲೆಯೊ ವರುಷದೊಳಗೊ?
- ವರುಷದೊಳಗೋ

(ವಿ.ಸೀ.ಯವರ ಕ್ಷಮೆ ಬೇಡಿ)
(ಕೊರವಂಜಿಯಿಂದ)

ಜಂಬಲ್ಸ್



ನ ಕ್ಕು ಬೆ ಪು ನು ಗಿ

ಪಂ ದ ರಿ ಚೆ ಹ

ಕಾ ಹಿ ಲು ಡಿ

ಡಿ ಪ್ಪು ತ ಕ್ಕ ಬೆ

ಪ ದ ಕೆ ತ್ರ ಬೆ ರಿ

ಪ್ರೊಫೆಸರ್ ಮಗ ಮತ್ತೆ ಫೇಲ್.

ಆಶ್ಚರ್ಯ ಏಕೆ? ಎಷ್ಟಾದರೂ ಅವನು _____ ಅಲ್ಲವೇ?

ಸರಿಯುತ್ತರಕ್ಕೆ ಕೊನೆಯ ಪುಟ ನೋಡಿ

ಕ್ರಿಕೆಟ್ - ನಾಸ್ಟಾಲ್ಜಿಯಾ!!

- ಹೆಚ್. ಗೋಪಾಲಕೃಷ್ಣ

ನಾನು ಕಾಲೇಜು ಓದುತ್ತಿದ್ದ ದಿನಗಳಲ್ಲಿ ಅಂದರೆ ಮುವತ್ತು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಚಿನ್ನಸ್ವಾಮಿ ಸ್ಟೇಡಿಯಂ ಇರಲಿಲ್ಲ. ಅಂಥಹ ಒಂದು ಸ್ಟೇಡಿಯಂ ಇಲ್ಲಿ ಬರಬಹುದು ಎಂಬುವ ಕಲ್ಪನೆ ಸಹ ನನ್ನಂತಹವರಿಗೆ ಇರಲಿಲ್ಲ. ಆವಾಗ ಮೊದಲನೇ ದರ್ಜೆಯ ಅಂತರ ರಾಜ್ಯ ಪಂದ್ಯಗಳು ಅಂದರೆ ರಣಜಿಟ್ರೋಫಿ ಪಂದ್ಯಗಳು ನಡೆಯುತ್ತಾ ಇದ್ದದ್ದು ಮುಖ್ಯವಾಗಿ ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ. ಒಂದೋ ಎರಡೋ ಪಂದ್ಯಗಳು ವೈ.ಎಂ.ಸಿ.ಎ. ಮೈದಾನದಲ್ಲಿ ನಡೆದದ್ದು ನನಗೆ ನೆನಪಿದೆ. ವೈ.ಎಂ.ಸಿ.ಎ. ಮೈದಾನ ಸೆಂಟ್ರಲ್ ಕಾಲೇಜಿನ ಮೈದಾನಕ್ಕಿಂತಲೂ ಚಿಕ್ಕದಾದದರಿಂದ ಅದು ಕ್ರಿಕೆಟ್ ಆಡಲು ನಾಲಾಯಕ್ ಆದ ಸ್ಥಳ ಎಂಬ ಭಾವನೆ ನನಗೆ ಎರಡೂ ಕಡೆ ಪಂದ್ಯಗಳನ್ನು ನೋಡಿದ ನಂತರ ಬಂದಿತ್ತು - ಆ ಭಾವನೆ ಈಗಲೂ ಸಹ ಹಾಗೇ ಇದೆ. ಈಗ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಪಂದ್ಯಗಳನ್ನು ನೋಡಿದ ನಂತರ ಸೆಂಟ್ರಲ್ ಕಾಲೇಜು ಮೈದಾನ ಪ್ರೇಕ್ಷಕರನ್ನು ಗಮನದಲ್ಲಿ ಇರಿಸಿಯೇ ಇರಲಿಲ್ಲ ಅಂತ ಅನಿಸುತ್ತೆ.

ಸೆಂಟ್ರಲ್ ಕಾಲೇಜಿನಲ್ಲಿ ನಾನು ಓದುತ್ತಿದ್ದುದು ಗ್ಯಾಸ್ (Gas) (ಗವರ್ನಮೆಂಟ್ ಸೈನ್ಸ್ ಮತ್ತು ಆರ್ಟ್ಸ್ ಕಾಲೇಜು - ಇದನ್ನು ಎಲ್ಲರೂ ಅಪಭ್ರಂಶ ಮಾಡಿ ಗ್ಯಾಸ್ ಕಾಲೇಜು ಅಂತ ಕರೆಯುತ್ತಿದ್ದರು - ಕಾಲೇಜು ಕೆಳ ಮಧ್ಯಮವರ್ಗದ ಅಷ್ಟೇನೂ ಬುದ್ಧಿವಂತರಲ್ಲದ ಆರ್ಥಿಕವಾಗಿಯೂ ಸಹ ಹಿಂದುಳಿದವರೇ ಈ ಕಾಲೇಜಿಗೆ ತುಂಬುತ್ತ ಇದ್ದುದರಿಂದ ಗ್ಯಾಸ್ ಕಾಲೇಜು ಎಂಬ ಹೆಸರು ಹಲವಾರು ಬಾರಿ ಅನ್ವರ್ಥವಾಗಿಯೂ ಪ್ರಯೋಗವಾಗುತ್ತಿತ್ತು) ಗ್ಯಾಸ್ ಕಾಲೇಜಿಗೂ ಮತ್ತು ಸೆಂಟ್ರಲ್ ಕಾಲೇಜಿಗೂ ಮಧ್ಯೆ ಒಂದೇ ಒಂದು ಸೀಳಿ ಹೋಗುವ ರಸ್ತೆ. ರಸ್ತೆ ದಾಟಿದರೆ ಸೆಂಟ್ರಲ್ ಕಾಲೇಜು, ಕಾಲೇಜಿನ ಹಿಂಭಾಗದ ಚಿಕ್ಕ ಗೇಟಿನ ಮೂಲಕ ಬಂದರೆ ಮತ್ತೊಂದು ರಸ್ತೆ ಅದರ ಎದುರು ಪ್ರಸನ್ನಕುಮಾರ್ ಮೆಮೋರಿಯಲ್ ಹಾಲ್ ಇತ್ತು. ಅದರ ಹಿಂಭಾಗವೇ ಸೆಂಟ್ರಲ್ ಕಾಲೇಜು ಮೈದಾನ. ಟಿಕೆಟ್ ಕೊಂಡು ನೇರವಾಗಿ ಮೈದಾನ ಪ್ರವೇಶಿಸಬೇಕು ಅಂಬುವ ಹಾಗಿದ್ದರೆ ಕೊಂಚ ಮುಂದೆ ಪೂರ್ವದ ಕಡೆ ನಡೆದು ನಂತರ ಎಡಕ್ಕೆ ತಿರುಗಿದರೆ ಸೆಂಟ್ರಲ್ ಜೈಲಿನ ಹಿಂಭಾಗದ ರಸ್ತೆ. ಅಲ್ಲೇ ಮೈದಾನಕ್ಕೆ ಪ್ರವೇಶದ್ವಾರ. ಕ್ರಿಕೆಟ್ ಪಂದ್ಯಗಳನ್ನು ಕಾಸು ಕೊಟ್ಟು ನೋಡಬಾರದು

ಎಂಬಂತಹ ಒಂದು ಅಲಿಖಿತ ನಿಯಮ ಗ್ಯಾಸ್ ಕಾಲೇಜಿನ ವಿದ್ಯಾರ್ಥಿಗಳಲ್ಲಿತ್ತು. ಆದರಿಂದ ಮೆಮೋರಿಯಲ್ ಹಾಲ್‌ಗೆ ಪ್ರವೇಶಿಸಿ, ಮೆಟ್ಟಲುಗಳ ಮೂಲಕ ತುದಿ ಸೇರುವುದು, ಅಲ್ಲಿಂದ ಸಜ್ಜಾಗಳ ಮೂಲಕ ಬಿಲ್ಡಿಂಗ್ ಮೇಲೆ ಹೋಗುವುದು, ಬಿಲ್ಡಿಂಗ್ ಪಕ್ಕಕ್ಕೆ ರಾಚಿಕೊಂಡಿದ್ದ ಮರದ ರೆಂಬೆಗಳ ಮೂಲಕ ನಿಧಾನಕ್ಕೆ ಮರದ ಬುಡ ಸೇರುವುದು - ಅಂದರೆ ನೇರ ಕ್ರಿಕೆಟ್ ಮೈದಾನಕ್ಕೆ ಗ್ಯಾಲರಿ ಪ್ರೇಕ್ಷಕರು ಕೂರುತ್ತಿದ್ದ ಜಾಗ ತಲುಪುತ್ತಿದ್ದೆವು. ಕಾಲೇಜಿನ ದಿವಸಗಳಲ್ಲಿ ಮಧ್ಯಾಹ್ನದ ಕೆಮಿಸ್ಟ್ರಿಲ್ಯಾಬ್‌ಗೆ ಚಕ್ಕರ್ ಹೊಡೆದು ನಾವು ನೋಡಿದ ಕ್ರಿಕೆಟ್ ಮ್ಯಾಚುಗಳು ಎಷ್ಟೋ - ಲೆಕ್ಕಕ್ಕೆ ಸಿಗದು!

ಕ್ರಿಕೆಟ್ ಆಟದ ಫಂಡಮೆಂಟಲ್ಲುಗಳನ್ನು ತಿಳಿದದ್ದು ಸಹ ಅಲ್ಲಿಯೇ. ಆಟದ ಕೊನೆಯ ಗಂಟೆಗಳಲ್ಲಿ ಗ್ರೌಂಡಿಗೆ ಓಡಿ ಅಲ್ಲಿಂದ ಪೆವಿಲಿಯನ್ ಸಹ ಸೇರುತ್ತಿದ್ದೆವು. ಪೆವಿಲಿಯನ್‌ಗೆ ಆಟ ಮುಗಿಸಿ ಹಿಂತಿರುಗುತ್ತಿದ್ದ ಆಟಗಾರರನ್ನು ಕೈಮೈ ಮುಟ್ಟಿ ಮಾತನಾಡಿಸುವಷ್ಟು ಸನಿಹದಿಂದ ನೋಡುತ್ತಿದ್ದೆವು. ಪ್ರಸನ್ನ, ಚಂದ್ರಶೇಖರ್, ಸುಬ್ರಮಣ್ಯಂ, ಅಶೋಕಾನಂದ್, ರಾಜಗೋಪಾಲ್, ವಿಜಯಕುಮಾರ್, ಜಗನ್ನಾಥ್, ಜಯಪ್ರಕಾಶ್... ಹೀಗೆ ಆಗಿನ ಖ್ಯಾತನಾಮರನ್ನು ಹತ್ತಿರದಿಂದ ನೋಡಿ ಕೈ ಕುಲುಕಿ ಸಂತೋಷಿಸಿದ್ದು ಈಗಲೂ ನನ್ನ ಮನದಲ್ಲಿ ಅಚ್ಚ ಹಸಿರು ಹಸಿರು.

ಈ ಕಾಂಪೌಂಡ್ ಹಾರಿ ಮರದ ರೆಂಬೆಗಳ ಮೂಲಕ ಗ್ಯಾಲರಿ ಸೇರುತ್ತಿದ್ದ ನನ್ನ ಸಾಹಸದಲ್ಲಿ ನನಗೆ ಎಂದೂ ಜತೆಗಾರರು ಎಂದರೆ ನಟರಾಜ ಮತ್ತು ನಾಗರಾಜ - ಈಗಲೂ ನನ್ನ ಗಳಸ್ಯ ಕಂಠಸ್ಯರಾಗೇ ಉಳಿದಿದ್ದಾರೆ. ದೂರ ದರ್ಶನದ ಪೆಟ್ಟಿಗೆ ಮುಂದೆ ಈಗ ಕ್ರಿಕೆಟ್ ಮ್ಯಾಚುಗಳನ್ನು ನೋಡುತ್ತಾ ಕುಳಿತಾಗ ಹಿಂದೆ ಹೆಲ್ಮೆಟ್ ಇಲ್ಲದ ಕಾಲದಲ್ಲಿ ಆಡುತ್ತಿದ್ದ ಹಲವಾರು ಕ್ರಿಕೆಟ್ ಪ್ರತಿಭೆಗಳು ಮತ್ತು ಅವರ ಆಟ ನನ್ನ ಕಣ್ಣಮುಂದೆ ಸುತ್ತಿ ಸುತ್ತುತ್ತಿದೆ. ಬ್ರಿಜೇಶ್ ಪಟೇಲನ ಆಟದ ನೆನಪು ನನಗಿನ್ನೂ ಇದೆ. ಆತನ ಸ್ಕೇರ್ ಡ್ರೈವ್ ಗಳ ಸೊಗಸು ಈಗ ನೋಡಿದ ಹಾಗಿದೆ.

ತಮಿಳುನಾಡು ವಿರುದ್ಧದ ಒಂದು ಮ್ಯಾಚು. ಕೃಪಾಲ್‌ಸಿಂಗ್ ಆಡುತ್ತಿದ್ದಾನೆ. ಕರ್ನಾಟಕದವರಿಗೆ ಆಗ ಇದು ಮೈಸೂರು ಟೀಮು. ಚಳ್ಳೆಹಣ್ಣು ತಿನ್ನಿಸಿ, ನೀರು ಕುಡಿಸಿ ಹಾಕಿದಾನೆ. ಚೆನ್ನಾಗಿ ಚಚ್ಚಿ ಚಚ್ಚಿ ಹಾಕಿಬಿಟ್ಟಿದ್ದ. ಮಧ್ಯಾಹ್ನದ ಟೀ ನಂತರ ಪ್ರಸನ್ನ ಬೋಲಿಂಗ್‌ಗೆ ಬಂದ. ಮೊದಲ ಬಾಲನ್ನೇ ಕೃಪಾಲ್‌ಸಿಂಗ್ ಬಾರಿಸಿದ. ಲಾಂಗ್ ಆನ್ ಪೊಸಿಷನ್‌ನಲ್ಲಿ ಬೌಂಡರಿಯಿಂದ ಕೆಲನವೇ ಗಜಗಳ ಒಳಗೆ ಚೆಂಡು ಮೊದಲ ಪುಟ ಬಿದ್ದು ನಂತರ ಬೌಂಡರಿ ಗೆರೆ ದಾಟಿತು. ನಾಲ್ಕು ರನ್ನು ಕೃಪಾಲ್‌ಸಿಂಗ್‌ಗೆ ಸೇರಿತು. ಕೂಡಲೇ ಟೀಮಿನ ಕ್ಯಾಪ್ಟನ್ ಆಗಿದ್ದ

ಸುಬ್ರಹ್ಮಣ್ಯಂ, ಪ್ರಸನ್ನ, ಅಶೋಕಾನಂದ ಮತ್ತು ಜಗನ್ನಾಥ್ ಅಲ್ಲೇ ನಿಂತು ಅದೇನೋ ಮಾತನಾಡಿಕೊಂಡರು. ಪ್ರಸನ್ನನ ಮುಖದಲ್ಲಿ ಒಂದು ರೀತಿಯ ಉಂಡು ಕೂತವರ ಸಂತೃಪ್ತ ಮನೋಭಾವ ಎಂದಿನ ಹಾಗೆ ತೋರುತ್ತಿತ್ತು. ಜಗನ್ನಾಥನನ್ನ ಹಿಂದಿನ ಬಾಲು ಮೊದಲನೇ ಪುಟ ಬಿದ್ದ ಕಡೆ ನಿಲ್ಲಿಸಿದರು. ಪ್ರಸನ್ನ ಸ್ಟೇಟ್ಸ್ ಥಿಯೇಟರ್ ಕಡೆಯಿಂದ ಎರಡನೇ ಬಾಲನ್ನು ಬೋಲ್ ಮಾಡಿದ. ಕೃಪಾಲ್‌ಸಿಂಗ್‌ಗೆ ಹಿಂದಿನ ಬಾಲು ಬೌಂಡರಿ ದಾಟಿ ಸಿಕ್ಸರ್ ಹಾರದೇ ಇದ್ದುದಕ್ಕೆ ಕೋಪ ಬಂದಿತ್ತು. ಅದೇ ತರಹ ಬಾಲು ಬಂದರೆ ಬಿಡುತ್ತಾನೆಯೇ? ಬ್ಯಾಟನ್ನು ಬೀಸಿ ಬಾರಿಸಿದ. ಇಡೀ ಸ್ಟೇಡಿಯಂ ಕಣ್ಣು ನೆಟ್ಟ ಬಾಲಿನ ಗತಿಯನ್ನು ವೀಕ್ಷಿಸುತ್ತಿತ್ತು. ಮೇಲೇರಿದ ಚೆಂಡು ಅದೇ ವೇಗ ಕಾಪಾಡಿಕೊಂಡು ನೇರವಾಗಿ ಹೋಗಿ ಜಗನ್ನಾಥನ ಕೈ ಸೇರಿತು! ಜಗನ್ನಾಥ ನಿಂತ ಜಾಗದಿಂದ ಒಂದೇ ಒಂದು ಮಿಲಿಮೀಟರು ಸಹ ಅತ್ತ ಇತ್ತ ಸರಿದಿರಲಿಲ್ಲ! ಪ್ರಸನ್ನನ ಬೋಲಿಂಗ್ ಚಾತುರ್ಯ ಈ ಮಟ್ಟದ್ದು. ಅದೇ ಮೊದಲನೇ ಸಲ ನಾನು ಗ್ರೌಂಡಿಗೆ ಓಡಿ ಪ್ರಸನ್ನನ ಕೈ ಕುಲುಕಿದ್ದು; ಜಗನ್ನಾಥನಿಗೆ ಬೆನ್ನು ಚಪ್ಪರಿಸಿದ್ದು; ಸುಬ್ರಮಣ್ಯಂ ಕೈಕುಲುಕಲು ಹೋದಾಗ ಒಬ್ಬ ಪೋಲೀಸಿನವನು ಅಟ್ಟಿಸಿಕೊಂಡು ಬಂದು ನನ್ನನ್ನ ಗ್ರೌಂಡಿನಿಂದ ಪೆವಿಲಿಯನ್‌ಗೆ ಓಡಿಸಿಬಿಟ್ಟ. ಇದೇ ತರಹದ ಕ್ಯಾಚನ್ನು ಜಯಸಿಂಹನ ಬ್ಯಾಟಿಂಗ್‌ನಲ್ಲಿ ಅದೇ ಪ್ರಸನ್ನನ ಬೋಲಿಂಗ್‌ನಲ್ಲಿ ಅಶೋಕಾನಂದ ಹಿಡಿದ - ಇದೇ ಮೈದಾನದಲ್ಲಿ. ಮರು ವರ್ಷದ ಪಂದ್ಯದಲ್ಲಿ ವಿಶ್ವನಾಥನ ಆಟ ಮೊದಲು ನೋಡಿದ್ದೂ ಸಹ ಇದೇ ಮೈದಾನದಲ್ಲಿ. ಅದೇತರಹ ಬಿ.ಎಸ್. ಚಂದ್ರಶೇಖರನ ಒಂದು ಆಟ ಸಹ ಈಗಲೂ ನನಗೆ ನೆನಪಿದೆ. ಅಂತರ ವಿಶ್ವವಿದ್ಯಾಲಯ ರೋಹಿನ್‌ಟನ್‌ಬಾರಿಯಾ ಕಪ್ - ಪಂದ್ಯಾವಳಿಯಲ್ಲಿ ಮೈಸೂರು ವಿ.ವಿ.ಗೂ ಬೆಂಗಳೂರು ವಿ.ವಿ.ಗೂ ಪಂದ್ಯ. ಚಂದ್ರು ಅದೇ ತಾನೇ ಪ್ರಸಿದ್ಧಿಗೆ ಬರುತ್ತಾ ಇದ್ದ. ಬೆಂಗಳೂರು ಟೀಮು ಮೊದಲು ಆಡಿ ಮುನ್ನೂರು ಚಿಲ್ರೆ ಪೇರಿಸಿತ್ತು. ಮೈಸೂರು ಟೀಮು ಆಟ ಆರಂಭಿಸಿದ ಆರನೇ ಓವರಿಗೇ ಚಂದ್ರ ಅಟ್ಯಾಕಿಗೆ ಬಂದ. ವಿಕೆಟ್‌ಗಳು ತುಪ ತುಪ ಅಂತ ಉದುರಿದವು. ಹಿಂದಿನ ಮ್ಯಾಚಿನಲ್ಲಿ ಒಂದೂವರೆ ಸೆಂಚುರಿ ಬಾರಿಸಿದ್ದ ರಾಮಪ್ರಕಾಶ ಎಂಬ ಮೈಸೂರು ಹುಲಿ ಎರಡನೇ ಬಾಲಿಗೇ ಬೋಲ್ಡು! ಎರಡೂ ಕೈಯನ್ನು ಅದರು ವಾಯು ಹಿಡಿದವರ ಹಾಗೆ ಆಡಿಸುತ್ತಾ ಬಂದ ರಾಮಪ್ರಕಾಶ 'ಅಯ್ಯೋ ಆಡುಕ್ಕೇ ಆಗುಲ್ಲಪ್ಪ ಶಾಕ್ ಹೊಡೆಯುತ್ತೆ....' ಅಂತ ಅಂದುಕೊಂಡು ಹೋಗಿದ್ದೂ ನೆನಪಿದೆ.

ನನ್ನ ಗೆಳೆಯ ಭೋಗೇಂದ್ರನ್‌ಗೆ ಕ್ರಿಕೆಟ್ ಬಗ್ಗೆ ಏನೊಂದರೆ ಏನೂ ತಿಳಿಯದು. 'ಕ್ರಿಕೆಟ್ ಹೇಗೆ ಆಡ್ತಾರೆ ತೋರಿಸ್ತೀನಿ ಬಾ' ಅಂತ ಒಂದು ಸಲ

ಅವನನ್ನ ಮೂರು ಘಂಟೆ ನಂತರ ಕ್ಲಾಸಿಗೆ ಚಕ್ಕರ್ ಹಾಕಿಸಿ ಕರೆದುಕೊಂಡು ಹೊರಟೆ. ಪ್ರಸನ್ನಕುಮಾರ್ ಮೆಮೊರಿಯಲ್ ಬಿಲ್ಡಿಂಗ್ ಹತ್ತಿ ಅಲ್ಲಿಂದ ಮರದ ರೆಂಬೆ ಹಿಡಿದು ಕೆಳಗೆ ಜಾರುವ ಸೂತ್ರ ಹೇಳಿ ನನ್ನ ಸಂಗಡ ಬಾ ಅಂದೆ.

'ಕಳ್ಳತನದಲ್ಲಿ ಕ್ರಿಕೆಟ್ ಮ್ಯಾಚು ನೋಡೋದಾ? ಬೇಡ....' ಅಂದ. 'ಇಂತಹ ಮ್ಯಾಚುಗಳನ್ನು ಕಳ್ಳತನದಲ್ಲೇ ನೋಡಬೇಕು' ಅಂತ ನನ್ನ ವಾದ ಮಂಡಿಸಿದೆ.

ಆತನಿಗೆ ನನ್ನ ವಾದ ಹಿಡಿಸಲಿಲ್ಲ.

'ಟಿಕೇಟಿಗೆ ಎಷ್ಟು?' ಅಂತ ಕೇಳಿದ

ಅವತ್ತು ಕೇರಳದ ಮೇಲೆ ಪಂದ್ಯ ನಡೀತಿತ್ತು. ಗ್ಯಾಲರಿಗೆ ಇಪ್ಪತ್ತೈದು ಪೈಸೆ ಟಿಕೆಟ್ಟು ಇಟ್ಟಿದ್ದರು. ಹೇಳಿದೆ.

'ಅಯ್ಯೋ ಅಷ್ಟೇನಾ? ನಿನ್ನ ಟಿಕೆಟ್ಟು ನಾನೇ ತಗೋತೀನಿ ಬಾ' ಅಂದ. ದುಡ್ಡು ತೆತ್ತು ಕ್ರಿಕೆಟ್ ನೋಡಬಾರದ ನನ್ನ ಧರ್ಮ ಸಂಕಟ ವಿವರಿಸಿದೆ. ಆತ ಸಂಪ್ರದಾಯಸ್ಥ ಅಯ್ಯಂಗಾರಿ. ಬಾಯಿ ತುಂಬಾ ನಕ್ಕ. 'ಟಿಕೇಟ್ಟಿಗೆ ಎಷ್ಟು ದುಡ್ಡು ಕೊಡ್ತೀನೋ ಅಷ್ಟೇ ನಿನಗೂ ಕೊಡ್ತೀನಿ - ನಿನ್ನ ಧರ್ಮ ಸಂಕಟ ಪರಿಹಾರ ಆದಾಹಾಗೇ ಬಾ...' ಅಂತ ಮತ್ತೆ ಕರೆದ. ಸರಿ ಅಂತ ತಲೆ ಆಡಿಸಿ ಧರ್ಮ ಸಂಕಟ ನಿವಾರಿಸಿಕೊಂಡು, ಟಿಕೇಟ್ ಕೊಂಡ. ಐವತ್ತು ಪೈಸೆ ಟಿಕೇಟ್ಟಿಗೆ - ಐವತ್ತು ಪೈಸೆ ನನಗೆ. ಮೈದಾನ ಪ್ರವೇಶಿಸಿ ಗ್ಯಾಲರಿ ಹತ್ತಿರದ ಮರದ ಅಡಿ ಸೇರಿದೆವು. ನಿಂತಲ್ಲಿಂದಲೇ ಆತನಿಗೆ ಕ್ರಿಕೆಟ್‌ನ ಬಗ್ಗೆ ಸಮಸ್ತ ವಿವರಗಳು ಫೀಲ್ಡ್ ಪೊಸಿಷನ್ನುಗಳು, ಕವರ್ಸ್, ಆಫ್‌ಸೈಡು ಲೆಗ್‌ಸೈಡು, ಮಿಡ್ ಆನು ಮಿಡ್ ಆಫು, ಲಾಂಗ್ ಆನು ಲಾಂಗ್ ಆಫು, ಗಲ್ಲಿ... ಹೀಗೆ ವಿವರಿಸಿದೆ. ಬೌಂಡರಿ ಅಂದರೇನು, ಬೌಂಡರಿ ನಂತರ ಬಾಲುಬಿದ್ದರೆ ಅದರ ವಿಶೇಷ ಏನು ಅಂತ ತಿಳಿಸಿದೆ. ಒಂದು ರೀತಿ ಮರದ ಕೆಳಗೆ ನಿಂತು ರನ್ನಿಂಗ್ ಕಾಮೆಂಟರಿ ಹರಿಸಿಬಿಟ್ಟೆ. ಅವನಿಗೆ ಈ ವಿವರಗಳನ್ನು ತಿಳಿಸುವ ಭರದಲ್ಲಿ ಸುತ್ತಮುತ್ತ ಗಮನಿಸಲಿಲ್ಲ. ಮಾತು ನಿಲ್ಲಿಸಿ ಸುತ್ತ ನೋಡಿದರೆ ನನ್ನ ಸುತ್ತಲೂ ನಲವತ್ತು ಐವತ್ತು ಜನರ ಒಂದು ಗುಂಪು ನಿಂತಿದೆ! ಒಬ್ಬ ದಡಿಯ ಹತ್ತಿರ ಬಂದು ಕೈ ಕುಲುಕಿ ಚೆನ್ನಾಗಿ ವಿವರಿಸಿದಿರಿ ಸಾರ್. ಇವೆಲ್ಲ ನನಗೆ ತಿಳಿದೇ ಇರಲಿಲ್ಲ... ಅನ್ನಬೇಕೇ? ಆಮೇಲೂ ಎಷ್ಟೋ ಸಲ ಭೋಗೇಂದ್ರ ಕಾಸುಕೊಟ್ಟು ನನ್ನನ್ನು ಮ್ಯಾಚಿಗೆ ಕರೆದೊಯ್ದಿದ್ದು ಉಂಟು. ಸೆಂಟ್ರಲ್ ಕಾಲೇಜಿನ ಈ ಮೈದಾನದ ಬಗ್ಗೆ ನೆನಪುಗಳು ಹರಿಯುವಷ್ಟು ಮಿಕ್ಕ ಯಾವ ಮೈದಾನದ ಬಗ್ಗೆಯೂ ಬರದು. ಅದೇನೋ ಅಂತಹ ಆಕರ್ಷಣೆ ನನಗೆ ಈ ಮೈದಾನದಲ್ಲಿ.

ತಮಿಳುನಾಡಿನ ರಣಜಿ ಟೀಮಿಗೆ ಬೆಸ್ತು ಬೀಳಿಸಿದ ಮತ್ತೊಂದು ಪಂದ್ಯ ಈ ಎಲ್ಲ ನೆನಪುಗಳಿಗಿಂತ ಮೇರು ಸ್ಥಾನದಲ್ಲಿದೆ. ದಕ್ಷಿಣ ವಲಯ ಚಾಂಪಿಯನ್‌ಗೆ ಸೌಂದರ ರಾಜನ್ ಟ್ರೋಫಿ ಅಂತ ಇತ್ತು. ಒಂದು ವಲಯದಿಂದ ಚಾಂಪಿಯನ್ ಆಗಬೇಕು ಅಂದರೆ ಅಲ್ಲಿ ಆಡಿದ ಪಂದ್ಯಗಳಿಂದ ಗಳಿಸಿದ ಪಾಯಿಂಟುಗಳಲ್ಲಿ ಅಗ್ರಸ್ಥಾನ ಪಡೆದಿರಬೇಕಿತ್ತು. ಇಂತಹ ಒಂದು ಸಂದರ್ಭದಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ತಮಿಳುನಾಡು ವಿರುದ್ಧದ ಪಂದ್ಯ. ಅತ್ತ ಹೈದರಾಬಾದಿನಲ್ಲಿ ಹೈದರಾಬಾದ್, ಆಂಧ್ರ ಪಂದ್ಯ, ಹೈದರಾಬಾದ್ ಆಂಧ್ರಮೇಲೆ ಲೀಡ್ ಪಡೆದರೆ ಅದಕ್ಕೆ ಪ್ರಶಸ್ತಿ, ಇತ್ತ ತಮಿಳುನಾಡು ಲೀಡ್ ಪಡೆದರೆ ಅದಕ್ಕೆ. ಇಲ್ಲವಾದಲ್ಲಿ ಕರ್ನಾಟಕಕ್ಕೆ ಇಂತಹ ಉಗುರು ಕಚ್ಚುವ ಪರಿಸ್ಥಿತಿ. ತಮಿಳುನಾಡು ಟೀಮು ಟಾಸ್ ಗೆದ್ದು ಕರ್ನಾಟಕಕ್ಕೆ ಬ್ಯಾಟಿಂಗ್ ನೀಡಿತು. ಹೈದರಾಬಾದಿನ ಮ್ಯಾಚಿನ ಮೇಲೆ ಒಂದು ಕಣ್ಣು ಎರಡು ಕಿವಿ ಇರಿಸಿ (ಆಗ ರೇಡಿಯೋಗಳಲ್ಲಿ ರನ್ನಿಂಗ್ ಕಾಮೆಂಟರಿ ಇರುತ್ತಿತ್ತು - ಈಗಿನ ಹಾಗೆ ದೂರದರ್ಶನ ಇರಲಿಲ್ಲ. ಕನ್ನಡ ಕಾಮೆಂಟರಿಯ ಬಗ್ಗೆ ಒಂದು ದೊಡ್ಡ ಲೇಖನವನ್ನೇ ರಚಿಸಬಹುದೇನೋ!) ಮೈಸೂರು (ಆಗಿನ ಟೀಮಿನ ಹೆಸರು) ಆಟ ಆರಂಭಿಸಿತು. ವಿಜಯಕುಮಾರ್ ಆರಂಭ ಆಟಗಾರನಾಗಿ ಮೈದಾನ ಪ್ರವೇಶಿಸಿದ. ಈತನ ಸಂಗಡ ರಾಜಗೋಪಾಲ್ ಇದ್ದ ನೆನಪು. ವಿಜಯಕುಮಾರ್ ಮೂರು ದಿನ ಬ್ಯಾಟಿಂಗ್ ನಡೆಸಿ ನೂರೂ ಚಿಲ್ಲರೆ ರನ್ ಪೇರಿಸಿ ತಮಿಳುನಾಡು ಪ್ರಶಸ್ತಿ ಪಡೆಯುವುದನ್ನು ನಿಯಂತ್ರಿಸಿದ! ತಮಿಳುನಾಡು ಈ ಪಂದ್ಯವನ್ನು ಬಹುವಾಗಿ ಪ್ರತಿಭಟಿಸಿತಂತೆ. ನಂತರ ಆಟದ ನಿಯಮ ಬದಲಾಗಿದ್ದು ಈಗ ಇತಿಹಾಸ. ತೀರ ಈಚೆಗೆ ವಿಜಯಕುಮಾರ್‌ರನ್ನು ಒಂದು ಸಮಾರಂಭದಲ್ಲಿ ನೋಡಿದೆ. ಆತನ ಈ ಆಟ ನೆನಪಿಸಿದೆ. ಆತನ ಮುಖದಲ್ಲಿ ಹೊಳಪು ಕಾಣಿಸಿತು - ಗಟ್ಟಿಯಾಗಿ ಸಂತೋಷದಿಂದ ನಕ್ಕ - ಕೈ ಹಿಡಿದು ಕುಲುಕಿದ. ಹಳೆಯ ನೆನಪುಗಳು ಎಂತಹ ಖುಷಿ ಕೊಡುತ್ತೆ ಅಂತ ಅನಿಸಿತು.

ಮೈಸೂರು ಟೀಮು ಸಿಕ್ಕಾಪಟ್ಟೆ ರನ್ನು ಪೇರಿಸಿ ಬಾಂಬೆ ಟೀಮಿಗೆ ತುಂಬಾ ಕಡಿಮೆ ಕಾಲಾವಧಿ ನೀಡಿದಾಗ ಗವಾಸ್ಕರ ಎಡಗೈನಲ್ಲಿ ಆಟವಾಡಿ ತನ್ನ ಅಪ್ರತಿಮ ಕ್ರೀಡಾ ಮನೋಭಾವ ತೋರಿಸಿದ್ದೂ ಸಹ ನೆನಪು. ಅದೇ ರೀತಿ ಇಡೀ ದಿನ ಪ್ಯಾಡಿನಿಂದಲೇ ಆಡಿದ ರಾಜಗೋಪಾಲ್; ಬುದ್ಧಿಸಾಗರದ ಕೃಷ್ಣಪ್ಪ ಎಂಬ ಆಟಗಾರ ಕುಂದರನ್ ಎಂದು ಹೆಸರು ಬದಲಾಯಿಸಿಕೊಂಡು ಕ್ರಿಕೆಟ್ ಜಗತ್ತಿನ ಅಪ್ರತಿಮ ವಿಕೆಟ್‌ಕೀಪರ್ ಆಗಿ ಮೆರೆದದ್ದು ಮೈಸೂರು ಟೀಮಿನಿಂದಲೇ ತೀರ ಈಚೆಗೆ ಕರ್ನಾಟಕದ ತಂಡದಿಂದ ಆರೇಳು ಜನ ಕ್ರಿಕೆಟಿಗರು ಭಾರತ ತಂಡಕ್ಕೆ ಆಯ್ಕೆಯಾದಾಗ "ನಾಳೆ ಮುಂಬೈನಿಂದಲೂ ಇಷ್ಟೇಜನ ಭಾರತದ

ಟೀಮಿನಲ್ಲಿದ್ದರೆ ಆಗ ಯಾರೂ ಗೊಣಗುವುದಿಲ್ಲ'' ಎಂದು ಗವಾಸ್ಕರ್ ಹೇಳಿದ್ದೂ ಸಹ ಈಗ ಇತಿಹಾಸ. ಪ್ರಸನ್ನ ಚಂದ್ರಶೇಖರ್ ಇಂತಹವರ ಆಟ ನೋಡಿದ ನಂತರ ಕ್ರಿಕೆಟ್‌ಗೆ ಮಂಕು ಬಡೀತದೆ ಎಂಬ ಅನಿಸಿಕೆಗಳು ಈಗ ಹುಸಿಯಾಗಿವೆ. ಆಟ ಆಕರ್ಷಕವೆನಿಸಲು ಹಲವಾರು ಕಾರ್ಯತಂತ್ರಗಳು, ಯೋಜನೆಗಳು ಚಾಲ್ತಿಯಲ್ಲಿವೆ.

ಮೊನ್ನೆ ಮೊನ್ನೆ ನಮ್ಮ ಮಠದ ಸ್ವಾಮಿಗಳೊಬ್ಬರು ಕ್ರಿಕೆಟ್ ಸೋಂಬೇರಿಗಳ ಆಟ. ಅದರಿಂದ ಆ ಆಟ ಬಹಿಷ್ಕರಿಸಬೇಕು. ಗ್ರಾಮೀಣ ಕ್ರೀಡೆಗಳಿಗೆ ಅವಕಾಶ ನೀಡಬೇಕು. ನಾವು ನಡೆಸುತ್ತಿರುವ ಸಂಸ್ಥೆಗಳಲ್ಲಿ ಕ್ರಿಕೆಟ್‌ಗೆ ಅವಕಾಶವಿಲ್ಲ. ಅಂತ ಅಪ್ಪಣೆ ಕೊಡಿಸಿದ್ದಾರೆ. ಇದು ನನಗೆ ತುಂಬಾ ತಮಾಷೆ ಅಂತ ಅನಿಸಿದೆ. ಕ್ರಿಕೆಟ್‌ಗೆ ಪರ್ಯಾಯ ಆಟ ಹುಡುಕಿದ ನಂತರ ಈ ಮಾತು ಹೇಳಿದ್ದರೆ ಚೆನ್ನು. ಗ್ರಾಮೀಣ ಕ್ರೀಡೆ ಕ್ರಿಕೆಟ್ ಹಾವಳಿಯಿಂದ ಹಾಳಾಗುತ್ತಿದೆ ಅಂತ ಆದರೆ ಗ್ರಾಮೀಣ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಬೇಡಿ ಅಂತ ಯಾರು ಹೇಳಿದಾರೆ? ಮಠಗಳವರು ಗ್ರಾಮೀಣ ಕ್ರೀಡೆಗೆ ಒತ್ತು ನೀಡಬಾರದೇ? ಅವರ ಕೈಕಟ್ಟಿ ಹಾಕಿರುವವರು ಯಾರು? ಇರುವಂತಹ ಮೈದಾನಗಳನ್ನು ವಿದ್ಯಾ ಸಂಸ್ಥೆಗಳು ಕಬಳಿಸಿ ಅದರಲ್ಲಿ ಮಹಡಿಗಳನ್ನು ಕಟ್ಟಿಸಿ ಡೊನೇಷನ್ ರೂಪದಲ್ಲಿ ಪಾಲಕರನ್ನು ಕೊಳ್ಳೆ ಹೊಡೀತಿರಬೇಕಾದರೆ - ಬೇಲಿಯೇ ಎದ್ದು ಅಂತ ಅದೇನೋ ಹೇಳ್ತಾರಲ್ಲ ಹಾಗಾಗಿದೆ! ಶಿಕ್ಷಣ ತಜ್ಞರು ಮತ್ತು ವಿದ್ಯಾಸಂಸ್ಥೆಗಳ ಯಜಮಾನರುಗಳು ಕ್ರಿಕೆಟ್ಟಿನ ಬಗ್ಗೆ ಅದೇನೇ ಹೇಳಿದರೂ, ಅಂತಹದೇ ನೆಗೆಟೀವ್ ಧೋರಣೆ ತಳೆದಿದ್ದರೂ ಕ್ರಿಕೆಟ್ ಆಟ ನಮ್ಮ ಜೀವನದಲ್ಲಿ, ರಕ್ತದಲ್ಲಿ ಸೇರಿಹೋಗಿದೆ! ಅದರಿಂದ ಕ್ರಿಕೆಟ್ ಬೇಡ ಅದನ್ನು ಆಡಬಾರದು ಎಂದು ಹೇಳುವವರು ನಮ್ಮಿಂದ ದೂರ ಆಗಬಹುದೇನೋ! ಆದರೆ ಜನ ಸಾಮಾನ್ಯರ ಹುಚ್ಚು ದೂರವಾಗುವುದು ಸಾಧ್ಯವಾಗದ್ದು ಎಂದು ನನ್ನ ಅಚಲ ದೃಢ ನಂಬಿಕೆ! ಮ್ಯಾಚ್ ಫಿಕ್ಸಿಂಗ್ ಹಗರಣದಂತ ಹಗರಣಗಳೂ ಸಹ ಬೇಸಿಗೆಯ ಮಂಜಿನಂತೆ ಕರಗಿ ಕ್ರಿಕೆಟ್ ಆಟ ಮತ್ತೆ ಪ್ರಜ್ವಲಿಸುತ್ತದೆ ಮತ್ತು ಇಪ್ಪತ್ತೆರಡು ಮೂರ್ಖರು ಆಡುವ ಆಟವನ್ನ ಇಪ್ಪತ್ತೆರಡು ಕೋಟಿ ಜನರು ವೀಕ್ಷಿಸುವುದು ಸಹ ಮುಂದುವರೀತದೆ.

ಕ್ರಿಕೆಟ್‌ಗೆ ಪರ್ಯಾಯ ಇದೆಯೇ ಅಂದರೆ ಇದೆ, ಅದೂ ಸಹ ಕ್ರಿಕೆಟ್ಟೇ! ನಾನು ಕಾಲೇಜಿನ ಕೊನೆಯ ವರ್ಷದಲ್ಲಿದ್ದಾಗ ಅಂದರೆ 1969ರಲ್ಲಿ ಅಂತ ತೋರುತ್ತೆ, ಈಗಿನ ಚಿನ್ನಸ್ವಾಮಿ ಸ್ಟೇಡಿಯಂಗೆ ಶಂಕುಸ್ಥಾಪನೆಯನ್ನು ಅಂದಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪ ನೆರವೇರಿಸಿದರಂತೆ. ಸೆಂಟ್ರಲ್ ಕಾಲೇಜು ಮೈದಾನದ ಪ್ರಾಧಾನ್ಯತೆ ನಿಧಾನಕ್ಕೆ ಕಣ್ಮರೆ ಆಗುತ್ತಾ ಬಂದು ಇದೀಗ ಮರೆತೇ ಹೋಗಿದೆ.

★★★

ಪ್ರಧಾನಿಗೊಂದು ಪತ್ರ

– ನಾಗಶ್ರೀ ಸೂರಿ

(ಹಾಲಲ್ಲಾದರು ಹಾಕು, ನೀರಲ್ಲಾದರು ಹಾಕು... ಹಾಡಿನ ಮಟ್ಟು)

ಕ್ಯಾಷಲ್ಲಾದರು ಕಳಿಸು, ಚೆಕ್ಕಲ್ಲಾದರು ಕಳಿಸು, ವಾಜಪೇಯೀ
ಕ್ಯಾಷಿದ್ರೆ ನಾಳೇನೆ ಚೆಕ್ಕಾದ್ರೆ ವಾರಕ್ಕೆ
ಹರಿಯುತ್ತೆ ಸಾಲ, ವಾಜಪೇಯೀ....

ಪೂರಾ ತಿಂಗಳ ಕೂಲಿ ಮೂರೇ ವಾರಕೆ ಖಾಲಿ, ವಾಜಪೇಯೀ
ಪೂರಾ ತಿಂಗಳ ಕೂಲಿ ಮೂರೇ ವಾರಕೆ ಖಾಲಿ, ವಾಜಪೇಯೀ
ತೂಗಿಸಿದೆ ಏಳೆಂಟು, ತೂಗದಿದೆ ನೂರೆಂಟು
ಇನ್ನೂ ಖರ್ಚು, ವಾಜಪೇಯೀ

ದಿನಸಿ ಅಂಗಡಿ ಬಾಕಿ ಇನ್ನೂ ಉಳಿದಿದೆ ಹಾಗೇ, ವಾಜಪೇಯೀ
ದಿನಸಿ ಅಂಗಡಿ ಬಾಕಿ ಇನ್ನೂ ಉಳಿದಿದೆ ಹಾಗೇ, ವಾಜಪೇಯೀ
ಕುಡಿದಿರುವ ನೀರಿಗೆ ಉರಿಸಿರುವ ದೀಪಕ್ಕೆ
ಕಾಸೆಲ್ಲಿ ತರಲೋ ವಾಜಪೇಯೀ

ಕ್ಯಾಷಲ್ಲಾದರು ಕಳಿಸು...

ಹಣಕಾಗಿ ತುಂಬಾನೇ ಪರದಾಟ ನನಗೀಗ, ವಾಜಪೇಯೀ
ಹಣಕಾಗಿ ತುಂಬಾನೇ ಪರದಾಟ ನನಗೀಗ, ವಾಜಪೇಯೀ
ನಿತ್ಯಾ ನೋಡುವ ಬಾಸು, ಕೇಳ ಹೋದರೆ ಕಾಸು
ಬೈದಟ್ಟುತ್ತಾರೋ ವಾಜಪೇಯೀ

ನೀ ಕೂಡಾ ಅವರಂತೆ ಹೋಗಾಚೆ ಅನಬೇಡ, ವಾಜಪೇಯೀ
ನೀ ಕೂಡಾ ಅವರಂತೆ ಹೋಗಾಚೆ ಅನಬೇಡ, ವಾಜಪೇಯೀ
ಖರ್ಚಿಗೆ ತಕ್ಕಷ್ಟು ಕಾಸನ್ನು ನೀ ಕಳಿಸಿ
ನನ್ನನ್ನು ಉಳಿಸೋ ವಾಜಪೇಯೀ
ಕ್ಯಾಷಲ್ಲಾದರು ಕಳಿಸು...

ಮಾರುತಿ ಮಾತನಾಡಲಿಲ್ಲ

- ಹೆಚ್.ಕೆ. ರಾಮಚಂದ್ರಮೂರ್ತಿ

(ಜೊನಿ ಗ್ವೊರೆಷಿ ಇಟಲಿಯ ಪ್ರಸಿದ್ಧ ಹಾಸ್ಯ ಲೇಖಕ. ಇವನ ಕಥೆಗಳು ವಿನೋದ ಪ್ರಸಂಗಗಳನ್ನು ನೀವು ಓದಿರುತ್ತೀರಿ. ಇಲ್ಲವಾದರೆ 'ಅಪರಂಜಿಯ' ಓದುಗರಾದ ನೀವು ಖಂಡಿತವಾಗಿ ಓದಿ. ಈ ರೂಪಾಂತರ ನಿಮ್ಮ ಕುತೂಹಲ ಆಸಕ್ತಿಗಳಿಗೆ ಸ್ಫೂರ್ತಿಯಾಗಬಹುದೋ ಏನೋ?)

ಅನಂತಾಚಾರಿ ಪ್ರಾಣದೇವರ ಗುಡಿ ಪೂಜಾರಿ. ಮಡಿವಂತ, ದೈವಭಕ್ತ. ಸಾಮಾನ್ಯವಾಗಿ ಸಾಧುಪ್ರಾಣಿಯಂತಿರುತ್ತಿದ್ದ ಅವನಿಗೆ ಊರಿನ 'ರಾಜಕಾರಣಿ'ಗಳನ್ನು ಕಂಡರೆ ಆಗುತ್ತಿರಲಿಲ್ಲ. ಕೋಪ ಬಂದಾಗ ಮಾತು ತುಟಿ ಮೀರುತ್ತಿದ್ದುದೂ ಉಂಟು.

ಅವನು ಪ್ರಾಣ ದೇವರ ಜತೆ ನಡೆಸುತ್ತಿದ್ದ 'ಡೈಲಾಗು'ಗಳು ಗ್ರಾಮ ಪ್ರಸಿದ್ಧವಾಗಿದ್ದವು. ಕೆಲವರು ಅವನನ್ನು ಅಪ್ಪಟ ಹುಚ್ಚ ಎಂದರೆ, ಸ್ವಲ್ಪ ಮಂದಿ ಅವನಿಗೆ ಪ್ರಾಣದೇವರ ಸಾಕ್ಷಾತ್ಕಾರವಾಗಿದೆ ಎನ್ನುತ್ತಿದ್ದುದೂ ಉಂಟು.

ಅವತ್ತು ಅವನ ಕೋಪ ಏಕೆ ಕೆರಳಿತೋ ತಿಳಿಯದು. ಅದು ಏಕಾದಶಿ - ಬೆಳಗಿನಿಂದ ಆಚಾರಿ ಬಾಯಿಗೆ ನೀರು ಸಹ ತಾಕಿಸಿರಲಿಲ್ಲ. ಬೆಳಗಿನ ಪೂಜೆ ಮಾಡುತ್ತಿರುವಾಗಲೇ ಮಂತ್ರದ ಮಧ್ಯೆ ಹಾರುವ ತುಂತುರಿನ ಜತೆಯಲ್ಲಿ ಮಣ ಮಣ ಗುಟ್ಟುತ್ತಾ ಯಾರಿಗೋ ಶಾಪ ಹಾಕುತ್ತಿದ್ದ. ಪಂಚಾಯ್ತಿ ಅಧ್ಯಕ್ಷರ ನಡತೆ ಸರಿಯಿಲ್ಲ ಅಂದ. ಗುಡಿಯೊಳಕ್ಕೆ ಬಂದಾಗಲೂ ಸೇದುತ್ತಿದ್ದ 'ಬೀಡಿ' ಆರಿಸಲಿಲ್ಲವೆಂದು ಬಡಗಿ ಬೈರಪ್ಪನನ್ನು ತರಾಟೆಗೆ ತೆಗೆದುಕೊಂಡ. ಕುಲುಮೆ ಮನೆ ಲಕ್ಷ್ಮಣ ಸಿಂಗುವಿನ ಹೆಂಡತಿ ಅಭಿಷೇಕಕ್ಕೆ ತಂದಿಟ್ಟಿದ್ದ ಹಾಲಿನಲ್ಲಿ ಜಿರಲೆ ಮೊಟ್ಟೆ ಇತ್ತು ಅಂತ ಎಗರಿಬಿದ್ದ.

ಆದರೆ ಅವನು ಪ್ರಾಣದೇವರ ಪರಮ, ಕಟ್ಟುಗ್ರ ಭಕ್ತ. ತಾನಾಡುವ ಅವಾಚ್ಯಗಳು ದೇವರಿಗೆ ಕೇಳಿಸದಿರಲಿ ಅಂತ ವಿಗ್ರಹಕ್ಕೆ ಮಡಿ ಪಂಚೆ ಹೊದಿಸಿದ್ದ. ಕೈಕಟ್ಟಿಕೊಂಡು ಅತ್ತಿತ್ತ ಶತಪಥ ತಿರುಗುತ್ತಾ ನೇರವಾದ ಭಾಷೆಯಲ್ಲಿ ಹಳ್ಳಿಯ ಪುಂಡ ಪೋಕರಿ ಪಟಾಲಮ್ ಅನ್ನು ಬೈದ. ಆದರೂ ನಾಲಿಗೆಯ 'ತಿಂಡಿ' ತೀರಿರಲಿಲ್ಲ. ಘರ್ಜಿಸಿದ. ಗುಡಿಯ ಹಳೆಯ ಗೋಡೆ ಥರಗುಟ್ಟಿತು, ರಾಮಮಂದಿರದಲ್ಲಿ ರಾತ್ರಿ ಇಡಿ ಜಮಾಯಿಸುತ್ತಿದ್ದ ಪರೇಲು ಆಟದ ಪಾತಕಿಗಳನ್ನು ಸಾಮೂಹಿಕವಾಗಿ ಬೈದ.

ಯಥಾಪ್ರಕಾರ ತನ್ನ ಒಂದೇ ಹ್ಯಾಂಡಲಿನ (ಇನ್ನೊಂದು ಹ್ಯಾಂಡಲಿನ ಮುರಿದ ಮೋಟಿಗೆ ಹಳೆ ಪಂಚಿನ ತುಂಡು ಸೇರಿಸಿದ್ದ) ಹಳೇ ಬೈಸಿಕಲ್ ಹತ್ತಿ ಮನೆ ಕಡೆ ಹೊರಟ, ಹಿಂದಿನಿಂದ ಯಾರೋ ಮುಸುಕುಧಾರಿ ಬಂದು ದೊಣ್ಣೆಯಿಂದ ಅವನನ್ನು ಸಕತ್ತಾಗಿ ಬಡಿದು ಮಾಯವಾದ. ಬೈಸಿಕಲ್ ಕ್ಯಾರಿಯರ್ ಮೇಲೆ ಎಣ್ಣೆ ಅಂಗಡಿ ಗಂಗಣ್ಣನಿಂದ ವಸೂಲು ಮಾಡಿದ್ದ 'ಘಮ್' ಎನ್ನುವ 'ತಾಜಾ' ಎಣ್ಣೆ ತುಂಬಿದ ಡಬ್ಬ ಇದ್ದುದರಿಂದ ಆಚಾರಿಗೆ ಆತ್ಮ ರಕ್ಷಣೆಗೂ ಅವಕಾಶವಿರಲಿಲ್ಲ.

ಹಿಂದಕ್ಕೆ ಬಂದು ಗುಡಿಯಲ್ಲಿ ಎಣ್ಣೆ ಡಬ್ಬ ಬಡಿದು, ಪ್ರಾಣದೇವರ ಮುಂದೆ ಮುಖಾಮುಖಿಯಾಗಿ ನಿಂತ. ಡೈಲಾಗು ಹೀಗೆ ನಡೆಯಿತು:

'ಈಗ ನಾನೇನು ಮಾಡಬೇಕು?' ಆಚಾರಿಯ ಪ್ರಶ್ನೆ. ಅದಕ್ಕೆ ಪ್ರಾಣದೇವರ ಪೀಠದಿಂದ ಬಂದ ಉತ್ತರ: 'ಒಂದಿಷ್ಟು ಆ ಡಬ್ಬದ ಎಣ್ಣೆಯನ್ನೇ ನೀರನಲ್ಲಿ ಕಡೆದು ಮೈಗೆಲ್ಲಾ ಸವರಿಕೋಪ್ಪ, ಇನ್ನು ಮುಂದೆ ಬಾಯಿ ಮುಚ್ಚಿಕೊಂಡಿರೋದ್ನ ಕಲಿಯೋ, ಆಚಾರಿ! ನಮಗೆ ಕೇಡು ಮಾಡಿದವರನ್ನು ಸಹ ನಾವು ಕ್ಷಮಿಸಬೇಕಲ್ಲವೇನಪ್ಪಾ...?'

'ಆದರೆ ಇದು ಕೇಡಿನ ಪ್ರಶ್ನೆಯಲ್ಲ ಪ್ರಭೂ... ನನಗೆ ಬಿದ್ದ ಒದೆಗಳ ಪ್ರಶ್ನೆ...'

'ಅಲೆ, ಇವ್ನ. ಹಾಗಂದರೇನೋ? ದೇಹದ ಮೇಲೆ ಒದೆಗಳು ಬಿದ್ದಾಗ ಆತ್ಮಕ್ಕೇನೂ ನೋವಾಗಲ್ಲ ಅಂತ ತಿಳಿದಿಲ್ವೇನೋ? ದೇಹ, ಆತ್ಮ ಎರಡೂ ಬ್ಯಾರ್ ಬ್ಯಾರೇ ಅಂತ ತಿಳಿವಲ್ದೇನೋ ಆಚಾರಿ'.

'ಆಂಜನೇಯ ಸ್ವಾಮಿ... ನಿಮ್ಮ ಪಾಯಿಂಟು ನನಗೆ ಅರ್ಥವಾಯ್ತು ಬಿಡಿ. ಆದರೆ ನನ್ನನ್ನು ಹೊಡೆದವನನ್ನು - ನಿಮ್ಮ ಪಾದ ಸೇವೆ ಮಾಡೋ ಈ ದಾಸನನ್ನು ಹೊಡೆದನಲ್ಲಾ... ಅವನನ್ನು ಹಾಗೇ ಬಿಡಬಹುದಾ' ಹ್ಯಾಂಗೆ? ಆಚಾರಿ ವಾಯುದೇವರಿಗೆ ಮರುಪ್ರಶ್ನೆ ಎಸೆದ.

'ಅಲ್ಕಣೋ ಆಚಾರಿ - ನಾನು ನಿನಗಿಂತ ಹೆಚ್ಚು ದೊಡ್ಡ ದಾಸ ಆಗಿರ್ಲಿಲ್ವೇನೋ? ನನ್ನ ದಣಿಗೋಸ್ಕರ ಲಂಕೆಯಲ್ಲಿ ಎಷ್ಟು ಒದೆ ತಿಂದೆ, ಮರೆತೆಯೇನೋ? ನನ್ನ ಬಾಲವನ್ನು ಸುಟ್ಟ ದೈತ್ಯರನ್ನು ಕ್ಷಮಿಸಲಿಲ್ವೇನೋ? ಅದಲ್ಲದೇ... ಹರಿಸರ್ವೊತ್ತಮನೆಂದು ಹಾಡಿದ ದಾಸರೇ ಹೇಳಲಿಲ್ಲವೇನೊ ಅಪ್ಪ? '... ಮೋಸ ಮಾಡಿದವನ ಹೆಸರ ಮಗನಿಗಿಡಬೇಕೂ ಅಂತ...' ಮಾರುತಿಯ ಕ್ವಟೇಷನ್ನು ಮಾರ್ಮಿಕವಾಗಿತ್ತು.

ಹೀಗೆ ಸಂಭಾಷಣೆ ಅತ್ಯಂತ ರಸಮಯವಾಗಿ ನಡೆದು ಕೊನೆಯಲ್ಲಿ ಅನಂತಾಚಾರಿ ಸೋತ. ಆದರೂ ತನ್ನನ್ನು 'ಮೈ ಹೆಣ, ಕೈ ಹೆಣ' ಬಡಿದವನು ಯಾರೆಂದು ತಿಳಿಯುವ ಕುತೂಹಲ ಅವನಿಗೆ...

ಒಂದು ಸಂಜೆ ಚೇರ್ಮನ್ ಚಂಗಪ್ಪನ ಭಾವಮೈದುನ III (ಅಂದರೆ ಪೂರ್ವೋಕ್ತ ಚೇರ್ಮನ್‌ರ 3ನೆಯ ಪ್ರೇಯಸಿ ತಮ್ಮ) ಅಣ್ಣಯ್ಯಪ್ಪ ಗುಡಿಗೆ ಬಂದ. ಹಣ್ಣುಕಾಯಿ ಸೇವೆ ಆಯಿತು. ಗುಡಿ ಗುಡಿ, ಭಕ್ತನಾದ ಅವನು ಹೆಚ್ಚಾಗಿ ದೇವಸ್ಥಾನಕ್ಕೆ ಬರುತ್ತಿದ್ದುದೇ ವಿರಳ. ಅವತ್ತು ಬೀಡಿ ಆರಿಸಿ ಹೊರಗಡೆ ಕಂಬದ ತಾವ ಇಟ್ಟು, ಗುಡಿ ಎದುರಿನ 'ಹನುಮಂತ ದೇವ್ರ ಹೊಂಡ' ವೆಂಬ ಕೆಸರು ಗುಂಡಿಯಲ್ಲಿ ಕಾಲದ್ದಿ ಒಳಕ್ಕೆ ಬಂದ. ಅವನ ಜತೆ ಲೋಕಾಭಿರಾಮವಾಗಿ ಮಾತನಾಡುವಾಗ ಆಚಾರಿಗೆ ತಿಳೀತು - ತನ್ನ ಬೆನ್ನ ಮೇಲಿನ ಬಾಸುಂಡೆಗಳ 'ಆಥರ್' ಯಾರು ಅಂತ. ಅಣ್ಣಯ್ಯಪ್ಪ ಮುಖ್ಯಪ್ರಾಣನ ಮುಂದೆ ಬಗ್ಗಿ ಕೂತು ಕಣ್ಮುಚ್ಚಿ ಏನೋ ಹೇಳ್ಕತಿದ್ದ. ಆಚಾರಿ ಪ್ರಾಣದೇವರ ಮುಂದೆ ಅಂಗಲಾಚಿ ಕೇಳಿದ: ಸ್ವಾಮಿ... ನಿಮಗೋಸ್ಕರ, ನಾನು ಒಂದೇ ಒಂದು 'ಧಫ' ಇವನನ್ನು ಹೊಡೀತಿನಿ.. ಆಗಬಹುದೇ ಪ್ರಭು?'

ಅದಕ್ಕೆ ರಾಮದೂತ ಎಲ್ಲಾದರೂ ಒಪ್ಪಿಯಾನೇ? ಅಣ್ಣಯ್ಯಪ್ಪ ಅಷ್ಟೇನೂ ಕೆಟ್ಟವನಲ್ಲವೆಂದೇ ಮಾರುತಿಯ ಅಭಿಪ್ರಾಯ. ಅವನ ಪರ ವಹಿಸಿಯೇ ಮಾತನಾಡಿದ. ಇಬ್ಬರ ನಡುವೆ ಕೆಲವು ನಿಮಿಷಗಳ 'ಡೈಲಾಗು' ನಡೆಯಿತು. ಆಚಾರಿ ಏನೇ ಲಾಗ ಹಾಕಿದರೂ ಪ್ರಾಣದೇವರು ಜಗ್ಗಲಿಲ್ಲ - ಏಕೆಂದರೆ ಅವನಿಗೆ ಭಕ್ತನ ಬುರುಡೆ ಜತೆ ಅವನ ಪ್ರಾಣವೂ ಮುಖ್ಯವಾಗಿತ್ತು.

'ಹೋಗಲಿ, ಈ ಕಸಬರಿಕೆಯಿಂದ ಒಂದೇ ಒಂದು ಸಲ ಅವನ ತಲೆ ಮೇಲೆ ಬಡೀತೇನೆ.... ಆಗಬಹುದೇ' ಆಚಾರಿ ಮತ್ತೆ ಬಾಯಿ ಬಾಯಿ ಬಿಟ್ಟು ಬೇಡಿದ.

'ಉಹುಂ... ಕಸಬರಿಕೆ ಇರೋದು ನಿನ್ನ ಧರ್ಮಪತ್ನಿಗೋಸ್ಕರ... ನಿನ್ನ ಅವಳ ಸಂಬಂಧವನ್ನು ಭದ್ರವಾಗಿಟ್ಟಿರೋ ಸಾಧನ ಅದು... ಅದೂ ಅಲ್ದೆ... ನಿನ್ನ ಕೈಗಳು ಇರೋದು - ಕೊಳೆತ ಹೂವು, ಗಬ್ಬುನಾರುವ ತೀರ್ಥ, ಜಿರಲೆ ತಿಂದು ಉಳಿಸಿದ, ಕಾಯಿಚೂರು - ಇವುಗಳನ್ನು ನನ್ನ ಭಕ್ತವೃಂದಕ್ಕೆ ಧಾರಾಳವಾಗಿ ಹಂಚಲಿ ಅಂತ' ಎಂದ ಅಂಜನಾ ಸುತ, ಆಂಜನೇಯಸ್ವಾಮಿ.


ಆಚಾರಿ ನೀಳವಾಗಿ ನಿಟ್ಟುಸಿರು ಬಿಟ್ಟ, ಹತಾಶನಾಗಿ ಹೊರಕ್ಕೆ ಹೊರಟವನು ಸರಕ್ಕನೆ ಹಿಂತಿರುಗಿ ಬಂದ. ಇನ್ನೂ ಮಂಡಿಯೂರಿ ಕುಕ್ಕರಿಸಿದ್ದ ಅಣ್ಣಯ್ಯಪ್ಪನ ಹಿಂದೆ ನಿಂತು, ಗೋಗರೆಯುತ್ತಾ ವಾಯು ದೇವರನ್ನು ಕೇಳಿದ: ಪ್ರಭು... ನನ್ನ ಕೈಗಳೇನೋ ತೀರ್ಥಪ್ರಸಾದ ಹಂಚಲಿಕ್ಕೆ ಸೃಷ್ಟಿಯಾದವು ನಿಜ... ಒಪ್ತೇನೆ... ಆದರೆ ನನ್ನ ಈ ಕಾಲುಗಳಲ್ಲವಲ್ಲಾ....?' ಕೊನೆಗೂ ಆಚಾರಿ ದೇವರನ್ನು ತನ್ನ ತರ್ಕದ 'ಕಟಿಂಗ್ ಪ್ಲೇಯರ್'ನಲ್ಲಿ ಹಿಡಿದಿದ್ದ....

'ಹಾಂ... ಸ್ವಲ್ಪ ತಾಳಲೇ ಆಚಾರಿ... ನೀನು ಅಂಬೋದ್ರಲ್ಲೂ ಕ್ವಂಚ ಅರ್ಥ ಇದೆ ಕಣೋ' ಆದ್ರೆ ನೆನಪಿರಲಿ... ಆಚಾರಿ... ಶಾಂತಿ... ಈ ಗ್ರಾಮದ ಶಾಂತಿ

ಮುಖ್ಯ. ನಿನ್ನ ಬುರುಡೆ ಮತ್ತು ಇನ್ನೂ ಊನವಾಗದೆ ಉಳಿದಿರೋ ನಿನ್ನ ಕೈಕಾಲುಗಳು ಮುಖ್ಯ... ಇವನನ್ನು ನೀನು (ಅಣ್ಣಯ್ಯಪ್ಪನೆಂದು' ಆಚಾರಿಗೆ ಅರ್ಥವಾಯ್ತು) ಕೇವಲ ಒಂದೇ ಬಾರಿ... ಒಂದೇ ಸಲ.... ಮಾತ್ರ... ತಿಳೀತಾ?' ವಾಯುದೇವರು ತಮ್ಮ ಇಂಗಿತವನ್ನು ನೀರವವಾಗಿ ಉಸುರಿದರು.

ಆಚಾರಿ, ಅಣ್ಣಯ್ಯಪ್ಪನನ್ನು ಹಿಂಬದಿಯಿಂದ 'ವಯಕ್' ಅಂತ ಒದ್ದಾಗ, ಸಿಡಿಲೆರಗಿದಂತಾಯಿತು. 'ಕಯ್ ಕುಯ್' ಎನ್ನದೆ ಅಣ್ಣಯ್ಯ ಪ್ರಾಯಶ್ಚಿತ್ತ ಸ್ವೀಕರಿಸಿದ... ಎದ್ದು ನಿಂತಾಗ ಅವನ ಹೃದಯ ಹಗುರವಾಗಿತ್ತು. ಅವನೆಂದ; 'ಲೇ ಅನಂತಪ್ಪ... ಇದಕ್ಕೇ ನಾನು ಹತ್ತು ನಿಮಿಷದಿಂದ ಕಾಯ್ತಾ ಇದ್ದೆ, ಕಳ್ಳೇ! ಸದ್ಯ ಈಗ ಮನಸ್ಸಿಗೆ ಸ್ವಲ್ಪ ನೆಮ್ದಿ ಆಯ್ತು ಬಿಡಪ್ಪ'. 'ನನಗೂ ಹಾಗೇ ಸಂತೋಷ ಆಯ್ತು ಕಣೋ ಅಣ್ಣಯ್ಯಪ್ಪ... ಏನೇ ಆದರೂ ನಮ್ಮ ನಮ್ಮ ಸ್ನೇಹ ಹಾಳಾಗಬಾರ್ದು ನೋಡು... ಗುಡಿಗೆ ಬರುತ್ತಾ ಇರು, ತಿಳೀತಾ?' ಎಂದ.

ಮಾರುತಿ ಮಾತ್ರ ಮಾತನಾಡಲಿಲ್ಲ. ಅವನಿಗೂ ಸಂತೋಷವಾಗಿತ್ತೆಂಬುದು ಅವನ ಅರೆಮುಚ್ಚಿದ ಕಣ್ಣುಗಳೇ ಹೇಳುತ್ತಿದ್ದವು.



WWW ಮ್ಯಾರೇಜ್.ಕಾಮ್!

– ಹಾ.ರಾ.

'ಎದುರು ಮನೇಲಿ ಗಂಡ್ಸಿಟ್ಕೊಂಡು ಊರೂರು ಅಲೀತಿದೀಯಲ್ಲ ವರಾನ್ವೇಷಣೆಗೆ' ಅಂತ ಕನಕಲಕ್ಷ್ಮಮ್ಮ ಹುಬ್ಬು ಹಾರಿಸುತ್ತ ಹೇಳಿದಾಗ ಕಾಶೀಪತಿ ಹೊಟ್ಟೇಲಿ ಫಿಜಿಯಲ್ಲಿ ಆದ ಹಾಗೆ ಒಂದು ಕ್ಷಿಪ್ರ ಕ್ರಾಂತಿ ನಡೆದು ಒಬ್ಬ ಕ್ರೂರ ರೆಬೆಲ್ ನಾಯಕನಂಥಹ ಭಯಂಕರ ತೇಗು ಹೊರಬಂತು ಕಾಶೀಪತಿ ಗೊಡ್ಡು ಸಂಪ್ರದಾಯಸ್ತನಾದ್ರೂ, ಮಗಳು ಕಂಪ್ಯೂಟರ್ ಬಿ.ಎಸ್.ಸಿ., ತುಂಬ ಜಾಣೆ ಮಗಳಿಗೆ ಮದುವೆ ಮಾಡಬೇಕೆಂದು ಕಾಶೀಪತಿ ತರದೂದಿನಲ್ಲಿದ್ದ.

ಶ್ಯಾಮ ಭಟ್ಟನಿಗೆ ಮಹಾ ಪ್ರತಿಷ್ಠೆ. ಅವನೇ ಎದುರು ಮನೆ ಗೃಹಸ್ಥ! ಮಗ ಕಂಪ್ಯೂಟರ್ ಎಂಜಿನಿಯರ್. ಹೆಣ್ಣುಗಳಿಗೇನು, ಮನೆ ಮುಂದೆ ಕ್ಯೂ ನಿಂತ್ಕೊಳ್ತಾರೆ ಎನ್ನುವ ಜಂಬ. ದುರಹಂಕಾರ. ದೊಡ್ಡಸ್ತಿಕೆ. ಪೌರೋಹಿತ್ಯದಲ್ಲೆ ಲಕ್ಷಾಂತರ ದುಡಿದು ಗಂಟು ಮಾಡಿದ್ದ! ಶ್ರಾದ್ಧಪ್ರಿಯ. ಕಾಶೀಪತಿ ಹಳೆ ಕಾಲದ ಗೊಡ್ಡು ವೈದೀಕ ಅಂತ ತಾತ್ಸಾರ ಮೂದಲಿಕೆ! ಇಬ್ಬರ ಮನೆಯಲ್ಲೂ ದರ್ಭೆ, ಸಮಿತ್ತು. ಜೊತೆಗೆ ಟಿ.ವಿ., ಕಂಪ್ಯೂಟರ್‌ಗಳೂ ಮಕ್ಕಳ ಕಾಲಕ್ಕೆ ಮನೆಯನ್ನು ಸೇರಿತ್ತು.


ಎರಡು ಮನೆಗಳಲ್ಲೂ ಒಳಗೇ ಕಂಪ್ಯೂಟರುಗಳು ಸೈಲೆಂಟಾಗಿ ಕೆಲಸ ಮಾಡ್ತಿತ್ತು. ಎದ್ರುಬದ್ರು ಮನೆಗಳು. ಹೊಗೋದು ಬರೋದು ಹುಡುಗ ಹುಡಿಗೀಗೆ ರೂಢಿ ಆಯ್ತು, ಅಪ್ಪಂದರು ಹಾರ್ಡ್‌ವೇರ್ ಆದರೂ ಮಗ ಮಗಳು ಸಾಫ್ಟ್‌ವೇರ್ ಪರಿಣಿತರು. WWW Love.com ಅಂತ ಒಂದು ವೆಬ್‌ಸೈಟ್ ಓಪನ್ ಆಯ್ತು! Email, Eve Mail. Dot com - Day time ಕ್ಯಾಕಾಮ್ ಎಲ್ಲಾ ಸರಸ ಸಲ್ಲಾಪಗಳೂ ನಡೆಯಿತು. ಕಾಪಿ, ಫ್ಲಾಪಿಗಳು ಎಕ್ಸ್‌ಚೇಂಜ್ ಆಯ್ತು. ಎರಡು ಮನೆಗಳಲ್ಲೂ Love Bug ಕಾಟ! ಅಂದರೆ y2k ಸಮಸ್ಯೆಗಳು ಉದ್ಭವವಾದವು. why not we two kick off ಎಂದುಕೊಂಡರು ಹುಡುಗ ಹುಡಿಗಿ ಇಬ್ಬರೂ!

ಕಾಶೀಪತಿ, ಶ್ಯಾಮಭಟ್ಟ ತಮ್ಮ ಪಾಡಿಗೆ ತಾವು ಗೋತ್ರ ನಕ್ಷತ್ರ, ಜಾತಕ ಅಂತ ಮೆಟ್ರೋಮೋನಿಯಲ್ ಬ್ಯೂರೋಗಳಿಗೆ ಮಾಹಿತಿ ಕೊಟ್ಟು ಜವಾಬಿಗೆ ಕಾಯುತ್ತ ಕುಳಿತರು. ಕಂಪ್ಯೂಟರ್‌ಗಳ ಮುಂದೆ ಮಾಹಿತಿ ಜ್ಞಾನ ಇತ್ತ ಬೆಳೆಯುತ್ತ ಹೋಯಿತು. Interaction, Introspection, Inspection ಎಲ್ಲ

ಸಾಂಗೋಪಾಂಗವಾಗಿ ನಡೆಯಿತು. ಪಾರ್ಕುಗಳಲ್ಲಿ, ಹೋಟಲುಗಳಲ್ಲಿ ಇತ್ಯಾದಿ! ಗ್ರಹಕೂಟ ಅಂತ ಅವರು, ಗೃಹಕೂಟ ಅಂತ ಇವರು. ನಾಡಿ ಅಂತ ಅವರು, ನೋಡಿ ಅಂತ ಇವರು. ಕಂಪ್ಯೂಟರುಗಳಲ್ಲಿ ಎರಡು ಜಾತಕಗಳಲ್ಲೂ ಹೊಂದಾಣಿಕೆ ಕಾಣಿಸ್ತು! ಕ್ಯಾಲಿಫೋರ್ನಿಯ ಕಡೆ ಜಾತಕ ಪಕ್ಷಿಗಳ ಗಮನ ಹರಿಯಿತು. ಮನೆಗಳಲ್ಲಿ ಕಂಪ್ಯೂಟರ್ ಭಾಷೆಯ ಬಳಕೆ ಜಾಸ್ತಿಯಾಗ್ತ ಬಂತು. ಕಾಶೀಪತಿ, ಶ್ಯಾಮಭಟ್ಟ ತೊಡಕಿಗೆ ಸಿಕ್ಕಿಕೊಂಡರು. ಕಂಪ್ಯೂಟರಲ್ಲಿ 'ಅಟಾಮಿಕ್ ಅಂಬ್ರಲ' ಚಿತ್ರ ಮೂಡಿಬಂದರೆ, ಅದೇನು ಕಾಶಿಯಾತ್ರೆ ಛತ್ರೀನೆ? ಅಂತ ಮಗಳನ್ನ ಕೇಳ್ತಾನೆ ಕಾಶಿಪತಿ! ಒಂದು ದಿನ 'ಸೈಬರ್‌ಪಾಸ್, ಸೈಬರ್ ಪಾಸ್' ಅಂತ ಮಗ ಹಿರಿ ಹಿಗ್ಗುತ್ತಿದ್ದುದನ್ನು ನೋಡಿ 'ಅದೇನು ಪಾಸೋ, ಬೈಪಾಸ್ ಥರವೆ? ಎಂದು ಕೇಳಿದ ಶ್ಯಾಮಭಟ್ಟ. ಇಬ್ಬರೂ ಶುದ್ಧ ಅನುಮಾನ ಪ್ರಕೃತಿಗಳು. ಪ್ರಪಂಚ ವ್ಯವಹಾರಜ್ಞಾನ ಕಡಿಮೆ. ನೆಟ್ಟಗೆ ಅವರಿಬ್ಬರೂ ಮಾರನೆದಿನ 'NET - ಕಂಪ್ಯೂಟರ್ ಎಜುಕೇಷನ್ ಅಕಾಡೆಮಿ' ವ್ಯವಸ್ಥಾಪಕಿ ಶೋಭಾನ್ಸೈಟ್ ಹತ್ತಿರ ಹೋಗಿ 'ಸೈಬರ್‌ಪಾಸ್' ಪದದ ಅರ್ಥ ಕೇಳಿದರು. ಶೋಭಾನ್ಸೈಟ್ ಸರಳವಾಗಿ ವಿವರಿಸುತ್ತ 'ಅದು ಕಂಪ್ಯೂಟರ್ ಭಾಷೆ, ನಿಮ್ಗೆ ಅರ್ಥವಾಗೊಲ್ಲ, ಆದ್ರೂ ತಿಳಿಯೋ ಹಾಗೆ ಹೇಳ್ತೀನೆ' ಅಂತ ಉತ್ಸಾಹ ತಾಳಿ ವಿವರಣೆ ಕೊಟ್ಟಳು. ಅವಳ ಪೆಪ್ಸೋಡೆಂಟುಗಳನ್ನೂ ಲುಕ್‌ಮಿ ತುಟಿಗಳನ್ನೂ ನೋಡುತ್ತ ನಿಂತುಕೊಂಡರು ಇಬ್ಬರೂ. ಶೋಭಾನ್ಸೈಟ್ ಹೇಳಿದಳು: ''ಹಿಂದೆ ನಮ್ಮ ದೇಶಕ್ಕೆ ಹೊರ ದೇಶಗಳ ರಾಜರು, ಮಹಾ ದಂಡನಾಯಕರು, ಆಕ್ರಮಣಕಾರರು ನಮ್ಮ ದೇಶಕ್ಕೆ ದಂಡೆತ್ತಿ ಬಂದವರೆಲ್ಲ 'ಖೈಬರ್ ಪಾಸ್' ಮುಖಾಂತರ ಬಂದವರೆ. ಅದು ಹಳೇ ಚರಿತ್ರೆ! ಈಗ ನಮ್ಮ ದೇಶದ ಹುಡುಗ ಹುಡಿಗಿಯರು ಅಮೆರಿಕದ ಆಕ್ರಮಣಕ್ಕೆ ದಂಡೆತ್ತಿ ಹೋಗುವುದು 'ಸೈಬರ್ ಪಾಸ್' ಮುಖಾಂತರ. ಸೂಕ್ಷ್ಮವಾಗಿ ಹೇಳಿದೇನೆ ಅಂತ www-History.com' ಬಟನ್ ಪ್ರೆಸ್ ಮಾಡಿದಳು.

ಕಾಶೀಪತಿ, ಶಾಮಭಟ್ಟ ಮನೆಗೆ ಓಡೋಡಿ ಬಂದ್ರು. ಕಾಶೀಪತಿ ಹೆಂಡ್ತಿ ತೌರಿಗೆ ಹೋಗಿದ್ದಳು. ಶ್ಯಾಮಭಟ್ಟನ ಹೆಂಡತಿಗೆ ಆಪರೇಷನ್ ಆಗಿ ಆಸ್ಪತ್ರೆ ಸೇರಿಕೊಂಡಿದ್ದಳು. ಮನೆಗಳಲ್ಲಿ ಯಾರೂ ಇಲ್ಲ. ಕಾಶೀಪತೀಗೆ ಕಂಪ್ಯೂಟರ್ ಪಕ್ಕದಲ್ಲಿ ಒಂದು ಕಾಗ್ದ ಸಿಕ್ತು. ಮಗಳು ಬರೆದಿಟ್ಟಿದ್ದ ಕಾಗದ: ''ನಾನು, ಶ್ಯಾಮಿ ಮದುವೆ ಮಾಡಿಕೊಂಡು 2-30ರ ಫ್ಲೈಟಿಗೆ ಕ್ಯಾಲಿಫೋರ್ನಿಯಾಕ್ಕೆ ಹಾರಿಹೋದೆವು. ಅಲ್ಲಿ ನಮಗೆ ಕೆಲಸ ಸಿಕ್ಕಿದೆ. ನಾಳೆ ಮಧ್ಯಾಹ್ನ ಲತಾ ಮನೆಗೆ ಬಂದು ಕಂಪ್ಯೂಟರ್ 'ಆನ್' ಮಾಡಿ ನಿಮಗೆ ಎಲ್ಲವನ್ನೂ ತೋರಿಸುತ್ತಾಳೆ, ನೀವೆಲ್ಲ ನೋಡಿ, ನಿಮ್ಮ ಮಗಳು - ಆಶ'' ಅಂತ ಬರೆದ ಕಾಗದ ಅದು. ಆ

ಕಾಗದದಲ್ಲಿ ಬರೆದಿದ್ದ ಹಾಗೆ ಮಾರನೆ ದಿನ ಲತಾ ಬಂದು ಕಂಪ್ಯೂಟರನ್ನು ಚಾಲನೆಗೊಳಿಸಿ "WWW-Marriage.com" ಇದು - ನೋಡಿ ಎಂದಳು. ಎಲ್ಲರಿಗೂ ಕುತೂಹಲ. ''ಆಶ-ಶ್ಯಾಮಿ ಮದುವೆ ಫೋಟೋ - ಕೆಳಗೆ Newly wedded couple, very many Happy returns" ಅಂತ ಬಣ್ಣದ ಬರಹ ಎಲ್ಲಾ ಕಂಪ್ಯೂಟರಿನಲ್ಲಿ ಮೂಡಿತು! ಶ್ಯಾಮಭಟ್ಟ ಮತ್ತು ಕಾಶಿಪತಿ ನೂತನ ದಂಪತಿಗಳಿಗೆ ಅಭಿನಂದನೆಗಳನ್ನು "E-Mail" ಮುಖಾಂತರ ಕಳಿಸುವ ಏರ್ಪಾಡು ಮಾಡಿದರು. ದರ್ಭೆ, ಸಮಿತ್ತು ಒಳ್ಳೇ ಫಲವನ್ನೇ ಕೊಟ್ಟಿತು!



ಶುಲ್ಕ

– ಹೆಚ್. ಗೋಪಾಲಕೃಷ್ಣ

ರಾತ್ರಿ ಅಡುಗೆಗೆ ಅಮ್ಮ ತಯಾರಿ ನಡೆಸುತ್ತಿರಬೇಕಾದರೆ ಚಿಕ್ಕ ಮಗ ಒಳಗೆ ಬಂತು. ಹೈಸ್ಕೂಲು ಓದುತ್ತಿದ್ದ ಮಗ ಅಮ್ಮನ ಕೈಗೆ ಒಂದು ಚೀಟಿ ನೀಡಿತು. ಅಮ್ಮ ಕೈ ಒರೆಸಿಕೊಂಡು ಚೀಟಿ ಬಿಚ್ಚಿ ಓದಿದಳು.

ಬೆಳಿಗ್ಗೆ ತರಕಾರಿ ತಂದದಕ್ಕೆ	1-00
ತಂಗೀನ ಬಸ್‌ಸ್ಟಾಪಿಗೆ ಬಿಟ್ಟಿದ್ದಕ್ಕೆ	2-00
ಅಪ್ಪನ ಬಟ್ಟೆ ಇಸ್ತ್ರಿ ಮಾಡಿಸಿದ್ದಕ್ಕೆ	3-00
ಸಾಯಂಕಾಲ ಅಂಗಡಿಯಿಂದ ಅಕ್ಕಿ ತಂದದ್ದಕ್ಕೆ	5-00
ಸಂಜೆ ಅಪ್ಪನ ಸ್ಕೂಟರು ಒರೆಸಿದ್ದಕ್ಕೆ	10-00
ರಾತ್ರಿ ತಂಗೀಗೆ ಲೆಕ್ಕ ಹೇಳಿಕೊಟ್ಟಿದ್ದಕ್ಕೆ	5-00
ಒಟ್ಟು	26 ರೂಪಾಯಿ

★★★

ಅಮ್ಮ ಮಗನ ಮುಖ ನೋಡಿದಳು. ಮಗ ದುಡ್ಡು ಸಿಕ್ಕುತ್ತೆ ಅಂತ ನಿಂತಿದ್ದ ಅಮ್ಮ ಪೆನ್ ತಾ ಅಂದಳು. ಪೇಪರ್ ತಿರುಗಿಸಿದಳು. ಅದರ ಹಿಂದೆ ಬರೆದಳು.

ನಿನ್ನನ್ನ ಒಂಬತ್ತು ತಿಂಗಳು ಹೊತ್ತು ಹೆತ್ತದ್ದಕ್ಕೆ - ಏನೂ ಛಾರ್ಜಿಲ್ಲ

ನಿನಗೆ ಹುಷಾರಿಲ್ಲದೇ ಇದ್ದಾಗ ಇಡೀರಾತ್ರಿ, ನಿನ್ನ ಪಕ್ಕ ನಿದ್ದೆ ಇಲ್ಲದೇ ಕೂತು ಕಾಲಕಾಲಕ್ಕೆ ನಿನಗೆ ಔಷಧಿ ನೀಡಿದ್ದಕ್ಕೆ - ಏನೂ ಛಾರ್ಜಿಲ್ಲ

ಇಷ್ಟೊರ್ಷ ನಿನ್ನಿಂದಾದ ಅಸಮಾಧಾನಕ್ಕೆ ನೀನು ಬರಿಸಿದ ಕಣ್ಣೀರುಗಳಿಗೆ ನಿನ್ನ ಪರವಾಗಿ ಬೈಸಿಕೊಂಡಿದ್ದಕ್ಕೆ - ಏನೂ ಛಾರ್ಜಿಲ್ಲ

ನಿನಗೆ ನೀಡಿರುವ ವಿದ್ಯಾಭ್ಯಾಸಕ್ಕೆ.... ಪುಸ್ತಕಗಳಿಗೆ, ನಿನ್ನ ಫೀಜು ಇತ್ಯಾದಿಗಳಿಗೆ - ಏನೂ ಛಾರ್ಜಿಲ್ಲ

ನಿನ್ನ ನೆನಪಿಗೆ ಬರುವ ಮತ್ತೆಲ್ಲವನ್ನೂ ಸೇರಿಸಿಯೂ ಸಹ ಅದರ ಬೆಲೆ ಸಂಪೂರ್ಣ ಪ್ರೀತಿ ಅಲ್ಲದೇ ಬೇರೆ ಏನೂ ಛಾರ್ಜಿಲ್ಲ.

ಮಗ ತಾಯಿ ಬರೆದದ್ದನ್ನು ಓದುತ್ತಾ ಓದುತ್ತಾ ಅಮ್ಮನನ್ನ ತಬ್ಬಿದ. ಕಣ್ಣೊರೆಸುತ್ತಾ ಎಲ್ಲಾ ಸಂದಿದೆ ಅಂತ ಬರೆದ!

(ಮೂಲ: Chicken Soop for the sool)

ಹಾಸ್ಯ ಕಮ್ಮಟ

– ಗೌತಮ

'ಹಾಸ್ಯಬ್ರಹ್ಮ' ಅಪರಂಜಿಯ ಓದುಗರಿಗೆ ಅಪರಿಚಿತವೇನಲ್ಲ.

ನಗುವ ಸಹಜ ಧರ್ಮದಲ್ಲಿ, ನಗಿಸುವ ಪರಧರ್ಮದಲ್ಲಿ, ನಗುವ ಕೇಳುತ ನಗಿಸುವ ಅತಿಶಯದ ಧರ್ಮದಲ್ಲಿ ನಂಬಿಕೆಯಿಟ್ಟಿರುವ ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ಸದಾ ಬೇಡಿಕೊಳುವ 'ಹಾಸ್ಯಬ್ರಹ್ಮ' ಇತ್ತೀಚೆಗೆ ಶ್ರೀವಾಣಿ ವಿದ್ಯಾಕೇಂದ್ರದಲ್ಲಿ ಪ್ರೌಢಶಾಲಾ ಮಕ್ಕಳಿಗಾಗಿ ಒಂದು ಹಾಸ್ಯ ಕಮ್ಮಟವನ್ನು ನಡೆಸಿಕೊಟ್ಟಿತು. ಒಂದೂವರೆ ದಿನಗಳ ಕಾಲ ನಡೆದ ಈ ಕಮ್ಮಟದಲ್ಲಿ ಅಣಕುವಾಡು, ಚಟಾಕಿ ಹಾರಿಸುವುದು, ಚುಟುಕು ರಚನೆ, ಹಾಯ್ಕುಗಳ ರಚನೆ, ಮೂಕಾಭಿನಯ, ಅಭಿನಯ, ಕಥೆ ಹೇಳುವ ಕಲೆ, ಮುಂತಾದ ಹಾಸ್ಯದ ಹಲವಾರು ಹಸನ್ಮುಖಿಗಳನ್ನು ಮಕ್ಕಳಿಗೆ ಪರಿಚಯ ಮಾಡಿಸಲಾಯಿತು.

ಎಳೆಯರಲ್ಲಡಗಿರುವ ಹಾಸ್ಯರಸದ ತುಂತುರೊಂದನ್ನು ಗುರುತಿಸಿ ಅದನ್ನೇ ಮಹಾ ಸಾಗರವನ್ನಾಗಿಸುವ 'ಹಾಸ್ಯಬ್ರಹ್ಮ'ದ ಈ ಪ್ರಯತ್ನ ತುಂಬ ಯಶಸ್ವೀಯಾಯಿತೆನ್ನುವುದಕ್ಕೆ ಕಮ್ಮಟದಲ್ಲಿ ಭಾಗಿಯಾಗಿದ್ದ ಮಕ್ಕಳೇ ನಡೆಸಿಕೊಟ್ಟ 'ಹಾಸ್ಯಸಂಜೆ'ಯೇ ಸಾಕ್ಷಿ 'ಹಾಸ್ಯಬ್ರಹ್ಮ' ಕಂಡಂತೆ. ಈ ಎಳೆಯರಲ್ಲಿ ಯಾರ‍್ಯಾರು ಬೀಚಿ, ರಾಶಿ, ನಾಡಿಗೇರರಾಗುವರೋ ಯಾರ‍್ಯಾರು ಕೈಲಾಸಂ, ಗೊರೂರರಾಗುವರೋ, ಕಾದು ನೋಡಬೇಕು.

ಕೃಷ್ಣ ಸುಬ್ಬರಾವ್, ಗೋಪಾಲಕೃಷ್ಣ ('ಪ್ರಭಾ') ರಾಮಮೂರ್ತಿ ('ಗೌತಮ') ವೈ. ಎನ್. ಗುಂಡೂರಾವ್, ಸೂರಿ ಹಾರ್ದಳ್ಳಿ, ಗುಂಡೂರಾವ್, ಪುರುಷೋತ್ತಂ, ಬೇಲೂರು ರಾಮಮೂರ್ತಿ, 'ಗಾನವಿನೋದನಿ' ತಂಡದ ಅಶ್ವಥ್, ಸುಬ್ಬುರಾಮು, ಯೋಗೇಶ್ ಮುಂತಾದವರೆಲ್ಲ ನೇರಿ ನಡೆಸಿಕೊಟ್ಟ ಈ ಕಮ್ಮಟದ ಒಂದು 'ಪ್ರಶ್ನೋತ್ತರ'

ಪ್ರಶ್ನೆ - ಹಾಗೆಂದರೇನು, ಹೇಗೆ ಕೇಳಬೇಕು, ಅದರ ಮಹತ್ವವೇನು, ಅದಕ್ಕೆ ಉತ್ತರಿಸುವುದು ಹೇಗೆ ಎಂಬೆಲ್ಲವುಗಳ ಬಗ್ಗೆ ತಿಳಿಸಿಕೊಟ್ಟ ನಂತರ 'ಹೋಂ ವರ್ಕ್' ಒಂದನ್ನು ಮಕ್ಕಳಿಗೆ ಕೊಡಲಾಯಿತು. ಬಂದ ಉತ್ತರಗಳು ನಿಜಕ್ಕೂ ನಮಗೆ ಖುಸಿ ನೀಡಿದವು. ಆಯ್ದ ಕೆಲವನ್ನು ನೀಡುತ್ತಿದ್ದೇವೆ.

'ದೇವರಿಗಿಟ್ಟ ನೈವೇದ್ಯವನ್ನು ದೇವರೇ ತಿಂದರೆ?' ಎಂಬುದೊಂದು ಪ್ರಶ್ನೆ. ಎಂಟನೆಯ ತರಗತಿಯ ಬಾಲಕನೊಬ್ಬ ಅಂಥ ದೇವರಿರುವ ಗುಡಿಯ ಬಾಗಿಲು ಮುಚ್ಚಿದರೆ ಇನೊಬ್ಬ ಹುಡುಗ ದೇವರ ನೈವೇದ್ಯಕ್ಕೇ ಸೊನ್ನೆ ಹಾಕುವನಂತೆ, ಅಡಿಗೆ ಮನೆಗೂ ದೇವರ ಮನೆಗೂ ನಡುವಣ ಸಂಬಂಧವನ್ನು ಕಟ್ ಮಾಡುವನಂತೆ, ನೈವೇದ್ಯದ ವಾಸನೆ ಕೂಡಾ ಮೂಗಿಗೆ ಬಡಿಯದಂತಹ ವ್ಯವಸ್ಥೆ ಮಾಡುವನಂತೆ. 'ಆ ದೇವರಿಗೆ ಗ್ಯಾಸ ಟ್ರಬಲ್' ಬಂದರೆ ಅನ್ನುವುದು ಮತ್ತೊಬ್ಬನ ಚಿಂತೆಯಾದರೆ, ತನಗೆಷ್ಟು ಬೇಕೋ ಅಷ್ಟನ್ನಿಟ್ಟುಕೊಂಡು ಉಳಿದದ್ದನ್ನು ದೇವರಿಗೆ ನಿವೇದಿಸುವ ಉದಾರ ಹೃದಯ ಮಗದೊಬ್ಬ.

'ನಾನು ಶಾಲೆಯ ಪ್ರಿನ್ಸಿಪಾಲ್ ಆದರೆ' ಇದು ಇನ್ನೊಂದು ಪ್ರಶ್ನೆ. ಕ್ಲಾಸ್ ರೂಮನ್ನ ರೆಸ್ಟ್ ರೂಂ ಮಾಡುವಾಸೆ ಒಬ್ಬನದಾದರೆ ದಿನಕ್ಕೊಂದು ಪೀಟಿ ಪೀರಿಯಡ್, ವಾರಕ್ಕೊಂದು ಹಾಸ್ಯೋತ್ಸವ, ತಿಂಗಳಿಗೊಂದು ಟೀಚರ್ಸ್‌ಡೇ, ವರ್ಷಕ್ಕೊಂದು ಪರೀಕ್ಷೆ ನಡೆಸುವ ಇರಾದೆ ಇನ್ನೊಬ್ಬನದು.

'ವೀರಪ್ಪನ್ ಮೀಸೆ ಎಗೆದು ಎಸ್ಸೆಂ ಕೃಷ್ಣರಿಗೆ ಅಂಟಿಸುತ್ತಿದ್ದೆ'. ಈ ಫೆಂಟಾಸ್ಟಿಕ್ ಉತ್ತರ ಬಂದದ್ದು 'ವೀರಪ್ಪನ್ ಕರ್ನಾಟಕದ ಮುಖ್ಯಮಂತ್ರಿಯಾದರೆ?' ಎಂಬ ಪ್ರಶ್ನೆಗೆ

'ಬೆನ್ನಲ್ಲಿ ಕಣ್ಣಿಟ್ಟಿದ್ದರೆ?' ಎಂಬ ಪ್ರಶ್ನೆಗಂತೂ 'ಪಿಕ್‌ಪಾಕೆಟ್ ಮಾಡೋರನ್ನ ಗಪ್ ಅಂತ ಹಿಡೀತಿದ್ದೆ' ಅಂತ ಒಬ್ಬನಿಗೆ (ಭಾವೀ ಪೋಲೀಸ್ ಆಫೀಸರ್) ಹೊಳೆದರೆ, 'ನಾಕ್ ಕಣ್ಣಿಗೂ ನಾಕ್ ಕನ್ನಡಕ ಹಾಕಬೇಕಲ್ಲಾ' ಎಂಬ ಚಿಂತೆ ಇನ್ನೊಬ್ಬ ಹುಡುಗನಿಗೆ. 'ಕಣ್ಣಿಲ್ಲದವರಿಗೆ ದಾನ ಮಾಡುತ್ತಿದ್ದೆ' ಎಂಬ ಉತ್ತರ ನೋಡಿದಾಗ ಪುಟ್ಟ ಹೃದಯದಲ್ಲಿ ಎಂಥ ಉದಾತ್ತ ಧ್ಯೇಯ ಎನ್ನಿಸಿತು.

ಮನದಲ್ಲಿ ನೆನೆದದ್ದು ಆ ಕ್ಷಣದಲ್ಲೇ ನನಸಾದರೆ?' ಇದು ಇನ್ನೊಂದು ಪ್ರಶ್ನೆ. 'ಗಾಳಿಯಲ್ಲಿ ಹಕ್ಕಿಯಂತೆ ಹಾರಾಡುತ್ತಿದ್ದೆ, ಆನೆಗಳನ್ನು 'ಸ್ಲಿಂ' ಆಗಿಸುತ್ತಿದ್ದೆ, ಟಾರು ರಸ್ತೆಯ ಮೇಲೆ ವಿಮಾನಗಳನ್ನು ಹಾರಾಡಿಸುತ್ತಿದ್ದೆ. ಹುಲಿ-ಹುಲ್ಲೆಗಳು ಒಂದರ ಹೆಗಲ ಮೇಲೆ ಇನ್ನೊಂದು ಕೈ ಹಾಕಿಕೊಂಡು ಓಡಾಡುವಂತೆ ಮಾಡುತ್ತಿದ್ದೆ, ಕತ್ತೆಗಳ ಕಂಠದಲ್ಲಿ ಕೋಗಿಲೆಯ ಇಂಪನ್ನಿಡುತ್ತಿದ್ದೆ. ಕಾಗೆಗಳನ್ನು ಕೊಕ್ಕರೆಗಳನ್ನಾಗಿಸುತ್ತಿದ್ದೆ....' ಲಲಿತ ಪ್ರಬಂಧಕಾರನಾಗುವ ಎಲ್ಲ ಲಕ್ಷಣಗಳನ್ನೂ ಬಿಂಬಿಸುವ ಕಿಶೋರನೊಬ್ಬನ ಉತ್ತರ. ಇದೇ ಪ್ರಶ್ನೆಗೆ ಅಂದುಕೊಂಡದ್ದೆಲ್ಲಾ

ಆಗುವುದಾದರೆ ಆ ದೇವರು ತಾನೆ ಏಕೆ ಬೇಕು?' ಎಂದು ಮರು ಪ್ರಶ್ನೆ ಹಾಕುತ್ತಲೇ ಉತ್ತರ ನೀಡಿದವಳು ಇನ್ನೊಂದು ಹುಡುಗಿ.

ಹಾಸ್ಯಮಯ ವಿಚಾರ ಪ್ರಚೋದಕ, ಮನಕಲಕುವ, ಕಣ್ತೆರೆಸುವ, ಅರಿವು ಮೂಡಿಸುವ ಉತ್ತರಗಳನ್ನು ನೀಡಿದ ಮಕ್ಕಳಲ್ಲಿರುವ ಈ ಪ್ರತಿಭೆಗಳನ್ನು ಗುರುತಿಸಿ ಹೊರಬರುವಂತೆ ಮಾಡಿ, ಒಂದೆರಡು ಮೆಟ್ಟಿಲುಗಳನ್ನು ಹತ್ತಿಸುವಲ್ಲಿ ನೆರವಾಗುವುದಷ್ಟೇ ನಮ್ಮ ಕರ್ತವ್ಯ. ಆ ನಂತರ ಅವರು ಉತ್ತುಂಗಕ್ಕೇರುವುದು ತಂತಾನೇ ಆಗುವ ಕ್ರಿಯೆ. ಏನಂತೀರಾ?



ಇಂದೆ ನಮ್ಮ ಬೋರನ್ಗೂನೂವೆ ಪೋಲಿಸ್ನೋರು
ಎರಡೇಟು ಆಕಿದ್ರು. ಕಾಂಪೆನ್ಸೇಷನ್ನೇನಾದ್ರೂ ಸಿಕ್ತಾದಾ?

ಮನೆಯೊಳಗಣ ಬಟ್ಟೆಯ ತುಂಡು

– ಧೃತಿ

ಬಟ್ಟೆಯ ತುಂಡಿದು ತನ್ನಯ ಮಹಿಮೆಯ
ಹೇಳುವುದಿಂತು ಓದುವರಾಗಿ

ಅನುದಿನ ಕಾರ್ಯದಿ ತೊಡಗಿಹೆ ನಾನು
ನನ್ನಯ ಕೆಲಸಕೆ ಕೊನೆ ಮೊದಲಿಲ್ಲ
ಕವಡೆಯ ಬೆಲೆಯನು ಕೊಡದೆ ಎನ್ನನು
ಕಡೆಗಣಿಸುವರೆ ಬಹು ಜನರೆಲ್ಲ

ನೀರನು ಕುಡಿಯುತ ಮನೆ ಮನೆ ನೆಲವ
ಶುಚಿಯಾಗಿಸುವ ಕೆಲಸವ ವಹಿಸುವ
ಬಟ್ಟೆಯು ನಾನು ನೆಲವನು ತೊಳೆಯುವ
ಸಾರಿಸೋಽ ಬಟ್ಟೆಯು ನಾನು

ಊಟದ ಮೇಜಿನ ಮೇಲಿನ ಅಡುಗೆಯ
ರುಚಿಯನು ನೋಡುತ ಚೆಲ್ಲಿದ ಅಗಳು,
ಸೋರಿದ ಸಾರು, ಬಿಸುಟ ಎಂಜಲು
ಎಲ್ಲವ ಒರೆಸುವ ಬಟ್ಟೆಯು ನಾನು

ಅಡುಗೆ ಮನೆಯ ಕಟ್ಟೆಯ ಎಣ್ಣೆಯ
ಒಲೆಯ ಮೇಲಿನ ಮುಸುರೆಯ ಕರೆಯ
ಹೋಗಲಾಡಿಸುವ ಬಟ್ಟೆಯು ನಾನು
ಕೊಳಕನು ಸಹಿಸುವ ಗಟ್ಟಿಗ ನಾನು

ಕಲಿಯುವ ಮಕ್ಕಳ ಶಾಲೆಯ ಚೀಲದ
ಸ್ಲೇಟನು ಒರೆಸುವ ಡಸ್ಟರ್ ನಾನು
ಬೋರ್ಡಿನ ಬರಹವ ಕಲಿಯುತ ಅಳಿಸುತ
ಮುಂದಿನ ಪಾಠವ ಕಾಯುವೆ ನಾನು

ದೇವರ ಪಟಗಳ, ಪ್ರತಿಮೆಯ ಮೇಲಿನ
ಮುಸುಕಿದ ಧೂಳನು ತೆಗೆಯುವೆ ನಾನು
ದೇವರ ಜೊತೆಗೆ ಮಡಿಯಲಿ ಕೂರುವ
ಅಂದದ ರೇಶಿಮೆ ವಸ್ತ್ರವು ನಾನು

ಪ್ರತಿ ಕೆಲಸಕು ಗಳಿಗೆಗು ನನ್ನನೆ ಅರಸುವ
ಗೃಹಿಣಿಯ ಕೈಯಲಿ ಶೋಭಿಪೆ ನಾನು
ಮನೆಯೇ ಮಂದಿರ ಎನ್ನುವ ನಾರಿಯ
ಆಣತಿ ಪಾಲಿಪ ಕೈ ವಸ್ತ್ರ ನಾನು

ಹರಕಲಿನ ದಯನೀಯ ರೂಪದಲು
ಕುಸುರಿಯ ಅಂಚಿನ ಆಡಂಬರದಲು
ಕುಗ್ಗದೆ ಹಿಗ್ಗದೆ ಒಂದೇ ರೀತಿಯ
ಕೆಲಸವ ಮಾಡುವ ಬಟ್ಟೆಯು ನಾನು

ಸಿರಿ ಬಡತನಗಳ ಅಂತರವಿಲ್ಲದೆ
ಮೇಲು ಕೀಳುಗಳ ಭಾವವು ಇಲ್ಲದೆ
ಮೈ ಧೂಳಾಗಿಸಿ ಶುದ್ಧಿಯ ನೀಗುವ
ಜನರೆಲ್ಲರ ಪರಿಚಾರಕ ನಾನು

ಹಳೆಗಾಲದ ಪರಿಚಾರಿಕೆ ಜೊತೆಗೆ
ಆಧುನಿಕತೆಯ ಬೆಡಗಿರಲೆಂದು
ಮಿಕ್ಸರ್‌ನಿಂದ ಫ್ರಿಜ್‌ನವರೆಗೆ
ಒರೆಸುವ ಸೇವೆಯ ನೀಯುವೆ ನಾನು

ಟಿವಿಯಿಂದ ಕಂಪ್ಯೂಟರ್‌ವರೆಗೆ
ಸಕಲ ಯಂತ್ರಗಳ ತಂತ್ರಗಳನ್ನು
ಬಲ್ಲವ ನಾನು ಕಾಲಕ್ಕೆ ತಕ್ಕಂತೆ
ಪುರುಷರ ಕೈಲೂ ಶೋಭಿಪೆ ನಾನು

ಎಲ್ಲೈಸಿ ಎಂದರೇನು?

– ಕು.ಗೋ.

ಭಾರತದ ಬಹುದೊಡ್ಡ ಆರ್ಥಿಕ ಸಂಸ್ಥೆಯಾದ ಭಾರತೀಯ ಜೀವನ ವಿಮಾ ನಿಗಮ ಯಾನೆ ಎಲ್ಲೈಸಿ ಆಗಾಗ್ಗೆ ಕೆಲವು ಪರೀಕ್ಷೆಗಳನ್ನು ನಡೆಸುತ್ತಾ ಇರುತ್ತದೆ. ಹೊಸ ನೌಕರರ ನೇಮಕಾತಿಗೆ ಇರುವ ನೌಕರರ ಬಡತಿಗೆ ವಿಮಾಸಪ್ತಾಹ ಆಚರಿಸುವ ಸಮಯ ಕೆಲವು ವಿದ್ಯಾರ್ಥಿಗಳಿಗೆ ಹೀಗೆ ಈ ಪರೀಕ್ಷೆಗಳು ನಡೆಯುತ್ತವೆ, ಸಾಮಾನ್ಯವಾಗಿ ಎಲ್ಲಾ ಪ್ರಶ್ನೆ ಪತ್ರಿಕೆಗಳಲ್ಲೂ ''ಎಲ್ಲೈಸಿ ಎಂದರೆ ಏನು?'' ಎಂಬ ಒಂದು ಪ್ರಶ್ನೆ ಇರುತ್ತಿತ್ತು - ಈ ಸಂಸ್ಥೆಯ ಬಗ್ಗೆ ಪರೀಕ್ಷಾರ್ಥಿಗಳು ಎಂಥ ಜ್ಞಾನವುಳ್ಳವರಾಗಿದ್ದಾರೆ ಎಂಬುದನ್ನು ತಿಳಿಯಲು ಕೆಲವು ಉತ್ತರ ಪತ್ರಿಕೆಗಳಲ್ಲಿ ಕಂಡುಬಂದ ಉತ್ತರಗಳ ಕೆಲವು ಸ್ಯಾಂಪಲ್‌ಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. ಪರೀಕ್ಷಾರ್ಥಿಗಳಲ್ಲಿ ಎಸ್.ಎಸ್.ಎಲ್.ಸಿ.ಯಿಂದ ಪಿ.ಹೆಚ್.ಡಿಯವರಿಗೆ ಕಲಿತವರೂ ಇದ್ದರು. ಅವರ ಹೆಸರು, ರಿಜಿಸ್ಟರ್ ನಂಬರ್ ಇತ್ಯಾದಿಗಳನ್ನು ಗೋಪ್ಯವಾಗಿಡಲಾಗಿದೆ. ಯಾರ ಮನಸ್ಸನ್ನೂ ನೋಯಿಸುವ ಇಚ್ಛೆ ಇಲ್ಲಿಲ್ಲ. ಉತ್ತರ ಸ್ವಾರಸ್ಯವಾಗಿದ್ದಲ್ಲಿ ಓದಿ ಅಲ್ಲೇ ನಕ್ಕು ಮರೆಯಬಹುದು.

ಕೆಲವು ಸ್ಯಾಂಪಲ್‌ಗಳು

1. ಎಲ್ಲೈಸಿ ಎಂದರೆ ಇಂಗ್ಲಿಷ್ ವರ್ಣಮಾಲೆಯ ಎಲ್.ಐ.ಸಿ. ಎಂಬ ಅಕ್ಷರಗಳನ್ನು ಜೋಡಿಸಿ ಆದ ಒಂದು ಪದಪುಂಜ. ಇದು ನಮ್ಮ ದೇಶವಿಡೀ ವ್ಯಾಪಿಸಿದೆ.

2. ಎಲ್ಲೈಸಿ ಅಂದರೆ ಬೆಂಗಳೂರಿನ ಜೆ.ಸಿ. ರಸ್ತೆಯಲ್ಲಿರುವ ಒಂದು ಬಹುಮಹಡಿ ಕಟ್ಟಡ. ಇದರ ಕೆಳಗೆ ತುಂಬಾ ಬೇರೆ ಬೇರೆ ನಮೂನೆಯ ಅಂಗಡಿಗಳೂ ಇವೆ.

3. ಮಧ್ಯದಲ್ಲಿ ದೀಪ ಇಟ್ಟು ಎರಡೂ ಕೈಗಳನ್ನು ಕಾಯಿಸಿಕೊಳ್ಳುವ ಒಂದು ಸಾಧನ.

4. ಎಲ್ಲೈಸಿ ಇದು ಎಲ್.ಎಸ್.ಡಿ.ಯ ಇನ್ನೊಂದು ಹೆಸರು

5. ಸತ್ತವರಿಗೆ ಹಣ ಕೊಡುವ ಸಂಸ್ಥೆ. ಸತ್ತವರು ಯಾರೂ ಹಣ ಕೇಳದೇ ಇರುವುದರಿಂದ ಈ ಸಂಸ್ಥೆಯಲ್ಲಿ ತುಂಬಾ ದುಡ್ಡು ಇದೆ ಎಂದು ಹೇಳಲಾಗುತ್ತದೆ. ಹಾಗಾಗಿ ಇದರಲ್ಲಿ ಕೆಲವು ಕೋಟಿಪತಿಗಳು ವರ್ಷ ವರ್ಷ ತಯಾರಾಗುತ್ತಿದ್ದಾರೆ.

6. ನನ್ನ ಚಿಕ್ಕಪ್ಪ ಕೆಲಸ ಮಾಡುವ ಒಂದು ಆಫೀಸು. ಕೆಲಸ ಕಡಿಮೆ. ಸಂಬಳ ಹೆಚ್ಚು. ಇದರಲ್ಲಿ ಕೆಲಸ ಮಾಡುವ ನೌಕರರು ವರ್ಷವಿಡೀ ಮುಷ್ಕರ, ಧರಣಿ, ಅನ್ನ ಸತ್ಯಾಗ್ರಹ ಮಾಡುತ್ತಾ ಇರುತ್ತಾರೆ. ಅಂಥ ಸಮಯದಲ್ಲಿ ಅವರಿಗೆ ಸಂಬಳ ಸಿಗುವುದಿಲ್ಲ.

7. ಇದು ಯಮನಿಗೆ ಸಂಬಂಧಪಟ್ಟ ಒಂದು ಇಲಾಖೆ. ಯಮದೂತರು ಇನ್ಶೂರೆನ್ಸ್ ಏಜಂಟರು ಎಂಬ ಹೆಸರು ಪಡೆದು ಕೈಯಲ್ಲೊಂದು ಚರ್ಮದ ಚೀಲ ಹಿಡಿದು ಮನೆ ಮನೆಗೆ ಹೋಗುತ್ತಾರೆ 'ಎಲ್ಲೈಸಿ ಮಾಡಿಸಲು' ಬೋಧಿಸುತ್ತಾರೆ. ಇವರಲ್ಲಿ ಕೆಲವರಿಗೆ ಮೋಟರ್ ಸೈಕಲ್, ಕಾರು ಎಲ್ಲಾ ಇರುತ್ತದೆ. ಇದರ ಬಗ್ಗೆ ಪೇಪರ್, ರೇಡಿಯೋ, ಟಿ.ವಿ.ಗಳಲ್ಲೂ ಸುದ್ದಿ ಬರುತ್ತಾ ಇರುತ್ತದೆ.

8. ಖರ್ಚು ಮಾಡಬೇಡಿ. ಹಣ ಉಳಿಸಿ ನಮಗೆ ಕೊಡಿ. ನಿಮ್ಮ ಪರವಾಗಿ ನಾವು ಖರ್ಚು ಮಾಡುತ್ತೇವೆ ಎಂದು ಹೇಳುವ ಸಂಸ್ಥೆ ಎಲ್ಲೈಸಿ. ನಾವು ಸತ್ತರೆ ಕೂಡಲೇ ಹಣ ಕೊಡುತ್ತಾರೆ. ಅಪಘಾತವಾಗಿ ಸತ್ತರೆ ಇಮ್ಮಡಿ ಹಣ ಸಿಗುತ್ತದೆ. ಅಪಘಾತದಲ್ಲಿ ಸಾಯುವುದರಲ್ಲಿ ಹೆಚ್ಚು ಲಾಭವಿದೆ, ಇದಕ್ಕೆ ಕನ್ನಡದಲ್ಲಿ ವಿಮೆ ಎಂದೂ ಹೇಳುತ್ತಾರೆ, ಇದನ್ನು ಖಾಸಗೀಕರಣ ಮಾಡುತ್ತಾರೆಂಬ ಸುದ್ದಿ ಇದೆ. ಅದಕ್ಕಾಗಿ ನೌಕರರು ಬೀದಿಗಿಳಿದಿದ್ದಾರೆ. ಏಕೆಂದರೆ ಅವರ ಕೆಲಸ ಹೋಗುತ್ತದೆಂಬ ಹೆದರಿಕೆ, ಹೀಗೆ ಎಲ್ಲೈಸಿ ಎಂದರೆ ಜನರಿಗೆ ಮುಖ್ಯವಾಗಿ ಅದರ ನೌಕರರಿಗೆ ಅದರ ಮೇಲೆ ತುಂಬ ಪ್ರೀತಿ.

9. ನಾವು ಕುಡಿಯುವ ನೀರು, ಸೇವಿಸುವ ಗಾಳಿ, ತೊಡುವ ಬಟ್ಟೆ, ಇರುವ ಮನೆ, ಕುಳಿತುಕೊಳ್ಳುವ ಕುರ್ಚಿ, ಮಲಗುವ ಮಂಚ, ಓಡಾಡುವ ರಸ್ತೆ ಸೈಕಲ್ ರಿಕ್ಷಾ ಬಸ್ಸು ಕಾರುಗಳು, ತಿನ್ನುವ ಅನ್ನ, ಉಗುಳುವ ಬೀಡಾ, ಕಲಿಯುವ ಶಾಲೆ, ನರಳುವ ಆಸ್ಪತ್ರೆ ಎಲ್ಲಾ ಕಡೆ ಈ ಎಲ್ಲೈಸಿ ಇದೆ. ಅಂದರೆ ಎಲ್ಲೈಸಿಯ ಹಣವಿದೆ. ಎಲ್ಲೈಸಿಯಿಂದ ಸಾಲ ತೆಗೆದುಕೊಂಡು ಈ ಎಲ್ಲಾ ಸವಲತ್ತುಗಳನ್ನು ಜನರಿಗೆ ನೀಡಲಾಗುತ್ತಿದೆ. ಆದ್ದರಿಂದ ಈ ಸಂಸ್ಥೆ ಸರ್ವವ್ಯಾಪಿ.

10. ಎಲ್ಲೈಸಿ ಅಂದರೆ ಲೋ ಇನ್‌ಕಂ ಕ್ಲರ್ಕ್ (Low Income Clerk) ಎಂಬುದರ ಹ್ರಸ್ವ ಸ್ವರೂಪ. ಕಡಿಮೆ ಸಂಬಳ ಪಡೆಯುವ ಗುಮಾಸ್ತ. ಆದ್ದರಿಂದ ಲಂಚಕ್ಕೆ ಅವಕಾಶವಿದೆ.

11. ಇದಕ್ಕೆ 'ಯೋಗಕ್ಷೇಮ'ವೆಂದೂ ಹೇಳುತ್ತಾರೆ. ಯೋಗ ಮತ್ತು ಕ್ಷೇಮ. ನಮಗೆ 'ಯೋಗ'ವಿದ್ದರೆ ಕೆಲಸ ಸಿಗುತ್ತದೆ. ಕೆಲಸ ಸಿಕ್ಕಿದರೆ ನಾವು 'ಕ್ಷೇಮ'ವಾಗಿರುತ್ತೇವೆ.

12. ಶ್ರೀ ಕೃಷ್ಣಪರಮಾತ್ಮನಂತೆ ಎಲ್ಲರ ಯೋಗಕ್ಷೇಮ ನೋಡಿಕೊಳ್ಳುವ ಸಂಸ್ಥೆ. ನನಗೂ ಈ ಸಂಸ್ಥೆಯಲ್ಲಿ ಕೆಲಸ ಸಿಕ್ಕಿ ನನ್ನ ಮನೆಯವರ ಯೋಗಕ್ಷೇಮ ನೋಡಿಕೊಳ್ಳಲು ಅನುಕೂಲವಾಗುತ್ತದೆ, ನನಗೆ ಹೆಚ್ಚು ಮಾರ್ಕು ಕೊಟ್ಟು ಪಾಸುಮಾಡುವಂತೆ ಪೇಪರ್ ತಿದ್ದುವವರಿಗೆ ಬುದ್ಧಿ ಕೊಡುವಂತೆ ಶ್ರೀ ಕೃಷ್ಣ ಪರಮಾತ್ಮನನ್ನು ಬೇಡಿಕೊಳ್ಳುತ್ತೇನೆ.

13. ಪತ್ರ ಬರೆದರೆ ಜವಾಬು ಕೊಡದ ಸಂಸ್ಥೆ. ಏಕೆಂದರೆ ಅಲ್ಲಿ ಕಂಪ್ಯೂಟರ್ ಇದೆ.

14. ಪ್ರೀಮಿಯಂ ಕಟ್ಟಲು ನೋಟೀಸು ಕಳಿಸುವ ಸಂಸ್ಥೆ ಎಲ್ಲೈಸಿ. ನಾವು ಹೆಚ್ಚು ಕೆಲಸ ಮಾಡಿ, ಹೆಚ್ಚು ಸಂಪಾದಿಸಿ, ಕಡಿಮೆ ಖರ್ಚು ಮಾಡಿ ಹೆಚ್ಚು ಉಳಿಸಿ ಎಲ್ಲೈಸಿ ಪಾಲಿಸಿ ತೆಗೆದುಕೊಳ್ಳಬೇಕು. ಬೇಗ ಸತ್ತರೆ ಹೆಚ್ಚು ಲಾಭ ಉಂಟು. ನಮ್ಮ ದುಡ್ಡಿನಲ್ಲಿ ಸರ್ಕಾರ ರಸ್ತೆ, ಸೇತುವೆ ಎಲ್ಲಾ ನಿರ್ಮಾಣ ಮಾಡುತ್ತದೆ. ಆಗ ಸರ್ವಾಂಗೀಣ ಸುಂದರ ಭಾರತ ತಯಾರಾಗುತ್ತದೆ.

15. ದೇಶದ ಮೂಲೆ ಮೂಲೆಯ ಜನರ ಹಣವನ್ನು ಒಟ್ಟುಮಾಡಿ ಸರ್ಕಾರಕ್ಕೆ ಕೊಡುವ ದೊಡ್ಡ ಸಂಸ್ಥೆ ಎಲ್ಲೈಸಿ, ಇಡೀ ದೇಶದ ಬಡತನವನ್ನು ಒದ್ದೋಡಿಸುವಷ್ಟು ಹಣ ಇದರಲ್ಲಿದೆ. ಇದರ ಹೆಡ್ ಆಫೀಸು ಮುಂಬಯಿಯಲ್ಲಿದೆ. ದೇಶವಿಡೀ ಇದರ ಆಫೀಸುಗಳಿಗೆ. ಅಲ್ಲದೆ 'ಹೊರ ದೇಶದಲ್ಲೂ ಎಲ್ಲೈಸಿ ಬಿಸಿನೆಸ್ ಮಾಡುತ್ತದೆ, ಇದರ ಹೆಚ್ಚಿನ ಆಫೀಸರುಗಳು ವಿಮಾನದಲ್ಲೇ ಸಂಚರಿಸುತ್ತಾರೆ. ನೌಕರರಿಗೆ ಒಳ್ಳೆಯ ಸಂಬಳ ಬೋನಸ್ ಸಿಗುತ್ತದೆ. ಕೆಲಸ ಕಡಿಮೆ ಆದ್ದರಿಂದ ನಾನಾ ರಾಜಕೀಯ ಮಾಡಲು ಅವಕಾಶವಿರುತ್ತದೆ, ಇದರ ಕಾನ್‌ಫೆರೆನ್ಸ್‌ಗಳು ಪಂಚತಾರಾ ಹೋಟೆಲುಗಳಲ್ಲಿ ನಡೆಯುತ್ತವೆ. ಎಲ್ಲೈಸಿಯ ಬೋರ್ಡುಗಳನ್ನು ಎಲ್ಲೆಲ್ಲೂ ನೋಡಬಹುದು - ಬಹು ಒಳ್ಳೆಯ ಸಂಸ್ಥೆ. ಇದರ ಅಭಿವೃದ್ಧಿ ಕಂಡು ಹೊರ ದೇಶದವರು ಹೊಟ್ಟೆಕಿಚ್ಚು ಪಡುತ್ತಿದ್ದಾರೆ, ಎಲ್ಲೈಸಿಗೆ ಒಳ್ಳೆಯದಾಗಲಿ. ಯೊಗಕ್ಷೇಮಂ ವಹಾಮ್ಯಹಂ ಜೈಹಿಂದ್

ಈ ರೀತಿ ಬರೆದ ಹೆಚ್ಚಿನವರು ಪಾಸಾಗಿ ಕೆಲಸ ಗಿಟ್ಟಿಸಿದ್ದಾರೆ. ಎಲ್ಲೈಸಿಗೆ ಶುಭವಾಗಲಿ.

ಹೊಸ - ರುಚಿ

– ಕಮಲಾ ರಾಮಸ್ವಾಮಿ

''ಕೋರಿಯರ್'' ಎಂದು ಬೆಲ್ ಬಾರಿಸಿ ಕೂಗಿದ ಧ್ವನಿಗೆ ಬೆಚ್ಚಿದೆ. ಎದ್ದು ಸೈನ್ ಮಾಡಿ ಪ್ಯಾಕೆಟ್ ತೆಗೆದುಕೊಂಡು ಹಿಂದೆ ಮುಂದೆ ನೋಡಿದೆ. ಓಹ್! ಮೀರಾ ಚೌಧರಿಯ ವಿಳಾಸ! ಸಂಭ್ರಮದಿಂದ ನಿಧಾನವಾಗಿ ಪ್ಯಾಕೆಟ್ ಬಿಚ್ಚಿದೆ. ''ಹೊಸ-ರುಚಿ'' - ಅಂದವಾದ ರಟ್ಟು, ಬಗೆಬಗೆಯ ತಿನಸಿನ ತಟ್ಟೆ, ಬಟ್ಟಲುಗಳು, ರಂಗು ರಂಗಿನ ಆಕರ್ಷಕ ವಿನ್ಯಾಸ, ಅಚ್ಚುಕಟ್ಟಾಗಿ ಮುದ್ರಿಸಿದ್ದ ಆ ಸುಂದರ ಪುಸ್ತಕ ಕೈ ಸೇರಿದಾಗ ಮಹದಾನಂದವಾಯಿತು. ಕಾಲಚಕ್ರದ ಗತಿಗೆ ಸಿಕ್ಕು ನನ್ನ ನಾಡಿಗೆ ಹಿಂದಿರುಗಿ 20 ವರ್ಷವಾದರೂ ಅಸ್ಸಾಮಿನ ಗೆಳತಿಯರು ನನ್ನನ್ನು ಮರೆತಿರಲಿಲ್ಲ. ''ಒಲವಿನ ಗೆಳತಿಗೆ - ರಂಗೇಲಿ ಬಿಹೂವಿನ ಸವಿನೆನಪಿಗಾಗಿ'' ಮೀರಾ ಚೌಧರಿ, ಎಂದಿದ್ದನ್ನು ಕಂಡು ಹಳೆಯದೆಲ್ಲಾ ನೆನಪಿಗೆ ಬಂತು.

ಬೋಕಾಜಾನ್‌ನಲ್ಲಿದ್ದ ಮಹಿಳಾ ಕ್ಲಬ್ಬಿನಲ್ಲಿ, ಅಲ್ಲಿದ್ದ ವಿದ್ಯಾವಂತ ಅಸ್ಸಾಮಿ ಮಹಿಳೆಯರು, ''ನಮ್ಮಲ್ಲಿ ಹೆಂಗಸರು ಹೊಸ ಬಗೆಯ ಅಡಿಗೆ ಪುಸ್ತಕ ಇಲ್ಲವೆ ನಮ್ಮ ಕಡೆ ಅಡಿಗೆಗಳ ಪುಸ್ತಕವನ್ನಾಗಲಿ, ಹೆಣ್ಣುಮಕ್ಕಳ ಅಭ್ಯುದಯದ ಬಗ್ಗೆ, ಪ್ರಗತಿಗೆ ಸಹಾಯಕವಾಗುವಂತಹ ವಿಚಾರ ಸಾಹಿತ್ಯಗಳು ಬಹಳ ಕಡಿಮೆ. ಇದರ ಬಗ್ಗೆ ಏನಾದರೂ ಮಾಡಬೇಕು'' ಎನ್ನುತ್ತಿದ್ದರು. ಈಗ ಈ ಪುಸ್ತಕ ರಾಣಿ ಗಗೋಯಿ ಬರೆದ ಇಂಗ್ಲೀಷ್ ಅಡಿಗೆ ಪುಸ್ತಕ. ನಿಜವಾಗಿ ಪ್ರಗತಿಯಾಗಿದೆ. ನಾನು ಕಂಡಾಗ ರಾಣಿಗೆ 19 ವರ್ಷ ಗೌಹಟಿಯಲ್ಲಿ ಓದುತ್ತಿದ್ದಳು. ಈಗ ಕಾಲೇಜಿನಲ್ಲಿ ಅಧ್ಯಾಪಕಿ.

ಹಾಳೆಗಳನ್ನು ತಿರುವಿ ಹಾಕಿದೆ. ಮೊದಲ ನುಡಿ ಸ್ವಾರಸ್ಯವಾಗಿತ್ತು. ಹೇಗೆ ದೇಶ ದೇಶಕ್ಕೆ ಊಟ, ಉಡುಗೆಯಲ್ಲಿ ವಿವಿಧ ರೀತಿ ವ್ಯತ್ಯಾಸ ಇರುತ್ತವೋ, ಅಂತೆಯೇ ಅದಕ್ಕೆ ಮುಖ್ಯ ಕಾರಣಗಳೂ ಉಂಟು ಎಂದು ಶುರು ಮಾಡಿದ್ದಳು ರಾಣಿ. ಬಂಗಾಳದಲ್ಲಿ ಅನ್ನ, ಮೀನು, ಮುಖ್ಯ ಆಹಾರ ವಸ್ತುವಾದರೆ, ಅದನ್ನು ದಾಟಿ ಉತ್ತರ-ಪೂರ್ವ ಪ್ರದೇಶಕ್ಕೆ ಕಾಲಿಟ್ಟರೆ ಅನ್ನ, ಮೀನಿನ ಜೊತೆ ಬಿದಿರು ಕಳಿಲು (ಬಿದಿರಿನ ಎಳೆ ಚಿಗುರು Bomboo shoots) ಅಷ್ಟೇ ಮುಖ್ಯ. ದಕ್ಷಿಣ - ಪೂರ್ವ ಏಷ್ಯಾ ಮತ್ತು ಚೈನಾದವರ ಅಡಿಗೆಗೂ ನಮ್ಮ ಅಡಿಗೆಗೂ ಬಹಳ ಸಾಮ್ಯವಿದೆ. ಸಪ್ತ-ಸಹೋದರಿಯ ನಾಡಾದ ಅಸ್ಸಾಂನಲ್ಲಿ ಇರುವಷ್ಟು ಪಂಗಡಗಳ ವೈವಿಧ್ಯತೆ ಮತ್ತೆಲ್ಲೂ ಕಾಣಲಾರವು - ಇತ್ಯಾದಿ.

ಅವಳಿಗೊಂದು ಕಾಗದ ಬರೆಯಲೇಬೇಕು. ಹಲವಾರು ಅಡಿಗೆಯ ವೈವಿಧ್ಯತೆ - ಅವುಗಳಲ್ಲಿನ ಶರ್ಕರಪಿಷ್ಠಾದಿಗಳ, ಅನ್ನಾಂಗಗಳ ಅಂಶ ಎಲ್ಲವನ್ನೂ ಪ್ರತಿ ಅಡಿಗೆಯ ಕೆಳಗೆ ಬರೆದಿತ್ತು. ಭಲೇ ಎಂದುಕೊಂಡೆ.

ಮುಂದೆ ವಿಶೇಷ ಅಡಿಗೆ - ಅಪರೂಪದ ಅತಿಥಿ ಬಂದಾಗ ಎಂಬ ಶೀರ್ಷಿಕೆ ಓದಿದೆ. ಚಟ್ನಿ, ಪುಲಾವ್, ಮೊಸರುಬಜ್ಜಿ, ಚಿಪ್ಸ್, ಕಡುಬು, (ಆಹ್ವಾನ ನೀಡುವ ಮೊದಲು, ಸಾಮಾನು ಸಂಗ್ರಹಿಸುವುದು ಮುಖ್ಯ. ಎಲ್ಲಾ ತಾಜಾ ಇರಬೇಕಾದ್ದರಿಂದ)

ಚಟ್ನಿ:- (ಮೇಘಾಲಯದ ಕಾಸಿ ಜನಾಂಗದ ರೆಸಿಪಿ)

1 ಚಮಚ ಸಕ್ಕರೆ, 1/2 ಚಮಚ ಉಪ್ಪು, 2 ಹಳಕು ಬೆಳ್ಳುಳ್ಳಿ, 1 ಈರುಳ್ಳಿ, 2 ಹಸಿ ಮೆಣಸಿನಕಾಯಿಯ ಜೊತೆ 1 ಪಾವು ಗೆದ್ದಲಿನ ಬಿಳಿ ಇರುವೆ ಇಲ್ಲವೆ ರೆಕ್ಕೆ ಬಂದ ಇರುವೆ ಹಾಕಿ ರುಬ್ಬಿ.

ಮೊಸರು ಬಜ್ಜಿ: ಗಟ್ಟಿ ಮೊಸರು ಕಡೆದು ಉಪ್ಪು, ಮೆಣಸು, ಚುಮುಕಿಸಿ. ಅದಕ್ಕೆ 150 ಗ್ರಾಂ ರೇಷ್ಮೆ ಹುಳವನ್ನು ಸೇರಿಸಿ ಮುಚ್ಚಿಡಿ. ಅರ್ಧಘಂಟೆಯ ನಂತರ ಜೀರಿಗೆ ಒಗ್ಗರಣೆ ಹಾಕಿ ಉಪಯೋಗಿಸಿ.

(ಇದನ್ನು ''ಪೊಲು ಕುಂವಾ ಲಿಹೊಂ'' ಎಂದು ಲಿಹೋಂ ಜನರಿಗೆ ಹೇಳಲು ಕಾರಣ ಇದು ಅವರ ತಿನಿಸು. ಬಾಣಂತಿಯರಿಗೆ, ಸಣ್ಣಮಕ್ಕಳಿಗೆ, ಗರ್ಭಿಣಿಯರಿಗೆ ಬಹಳ ಪೋಷಕದಾಯವಾದ ಅಡಿಗೆ, ನಾಗಾಲ್ಯಂಡ್‌ನಲ್ಲಿ ಪ್ರಖ್ಯಾತವಾದದ್ದು.)

ಚಿಪ್ಸ್:- ಎಣ್ಣೆ ಕಾಯಿಸಿ, ಜೇನು ನೊಣ ಮತ್ತು ಬೆಮ್ಮಂಡೆ ಹಾಗೂ ಮಳೆ ಹುಳಗಳನ್ನು ಕರಿದು, ಉಪ್ಪು, ಖಾರ ಹಾಕಿಡಿ.

ಕಡಬು:- ಎಳೆಯ ಇಲಿಮರಿ (ಸುಂಡಿಲಿ)ಗಳನ್ನು ಹಿಡಿದು ಬಾಳೆಯೆಲೆಯಲ್ಲಿ ಸುತ್ತಿ ಕೆಂಡದಲ್ಲಿ ಕೆಂಡರೊಟ್ಟಿಯಂತೆ ಬೇಯಿಸಿ. ನಂತರ ಸೀಳಿ ಮಸಾಲೆ ತುಂಬಿ ಬಡಿಸಿ. ಮಣಿಪುರ ಮತ್ತು ಅರುಣಾಚಲ ಪ್ರದೇಶದ ಬಯಕೆಯ ತಿನಿಸು.

''ಸಿಂಪಲ್ ಪುಲಾವ್'':- ಅಸ್ಸಾಮಿನಲ್ಲಿ ಭತ್ತದ ಹೊಲಗಳಲ್ಲಿ ''ಆನೆ ಜಿಗಣೆ'' Elephant leech ಸಿಗುತ್ತವೆ. ಅವುಗಳನ್ನು ಹಿಡಿದು ತಂದು, ಬಿಸಿ ಬಿಸಿ ಅನ್ನಕ್ಕೆ ಉಪ್ಪು, ತುಪ್ಪ ಹಾಕಿ ಈ ಜಿಗಣೆಗಳನ್ನು ಮೇಲೆ ಹರಡಿ ಮುಚ್ಚಿಡಿ. 1/2

ಗಂಟೆಯ ನಂತರ ಸಣ್ಣ ಉರಿಯಲ್ಲಿ ಇಲ್ಲವೆ ಬಿಸಿ ಬೂದಿಯಲ್ಲಿಟ್ಟು ಬಿಸಿ ಮಾಡಿ ಬಡಿಸಿ.

ಸ್ಪೆಷಲ್ ಪುಲಾವ್:- ಅಸ್ಸಾಂನ ಜನಕ್ಕೆ ನಾಯಿ ಮಾಂಸದ ರುಚಿ ಬಹಳ. ನಾಯಿ ಮಾಂಸದಲ್ಲಿ ಪೌಷ್ಟಿಕಾಂಶವಲ್ಲದೆ ಔಷಧಿಯ ಗುಣಗಳೂ ಇವೆ ಎನ್ನುತ್ತಾರೆ ನಾಗಾ ಜನರು. ಅಪರೂಪದ ಅತಿಥಿಗಾಗಿ 2 ರಿಂದ ನಾಲ್ಕು ವರ್ಷ ಚೆನ್ನಾಗಿ ಬೆಳೆಸಿದ ನಾಯಿ ತಂದು 4ದಿನ ಉಪವಾಸ ಕೆಡವಿ, ಐದನೇ ದಿನ ಅರ್ಧಂಬರ್ಧ ಬೇಯಿಸಿದ ಅನ್ನ ಉಪ್ಪು ಚಿಮುಕಿಸಿ ತಿನಿಸಿ. ಗಬಗಬ ತಿನ್ನುವ ನಾಯಿಗೆ ಹೊಟ್ಟೆ ಉಬ್ಬರಿಸುವ ತನಕ ತಿನ್ನಿಸಿ. ನಂತರ ಸಜೀವ ದಹನ (ಬಾರಬಾಕ್ಯೂ) ಮಾಡಿ, ನಂತರ ಹೊಟ್ಟೆ ಸೀಳಿ, ಅದರ ಮಾಂಸದೊಂದಿಗೆ ಬೆಂದ ಅನ್ನಕ್ಕೆ ಮಸಾಲೆ ಹಾಕಿ ಪುಲಾವ್ ಮಾಡಿ ಬೆಕ್ಕಿನ ಮಾಂಸವನ್ನು ಉಪಯೋಗಿಸುತ್ತಾರೆ ಹಲವೆಡೆ. ಆದರೆ ಅದು ಅಷ್ಟು ಪ್ರಸಿದ್ಧಿಯಲ್ಲಾ. ಸಂತೆಗಳಲ್ಲಿ ವಿವಿಧ ರೀತಿಯ ನೀರು ಹಾವು, ಹಾವು, ಹಲ್ಲಿ, ಓತಿಕೇತಗಳನ್ನು ಒಣಗಿಸಿ ಬಾಳಕ ಮಾಡಿ ಮಾರುವುದನ್ನು ಇಂದೂ ನೋಡಬಹುದು.

ಮುಂದೆ ಓದಲಾಗಲಿಲ್ಲ. ಅವರವರ ರುಚಿ ಅವರವರಿಗೆ. ಹೊಟ್ಟೆ ಕಲಸಿದಂತಾಗಿ ಪುಸ್ತಕ ಮುಚ್ಚಿಟ್ಟೆ.



"ಆಟೋ ಅಪ್ಪಣ್ಣ ಮನೇಗೆ ಬಂದ !"

ನಿಮಗೆ ಬಡ್ತಿ ಬೇಕಾ?

ಎಂ.ಎನ್.ಕೆ.

ಕೆಲಸ ಮಾಡೋರೆಲ್ಲ ತಮ್ಮ ಸರ್ವೀಸ್ನಲ್ಲಿ ಎದುರು ನೋಡೋದು ಯಾವತ್ತು ತಮ್ಮ ಹೆಸರು ಪ್ರೊಮೋಷನ್ ಲಿಸ್ಟ್ ಅಲ್ಲಿ ಬರುತ್ತೇಂತ. ಹಾಗಂತ ಸುಮ್ಮನೆ ಕೂತಿರಕ್ಕಾಗಲ್ವಲ್ಲಾ. ಟ್ರೈ ಮಾಡ್ಲೇಬೇಕಲ್ಲಾ. ಮಂತ್ರದಿಂದ ಮಾವಿನಕಾಯಿ ಉದುರೋದಿಲ್ಲ. ಕಾಯಿ ಕೆಳಗೆ ಬೀಳ ಬೇಕಾದ್ರೆ ಸ್ವಲ್ಪ ಶ್ರಮ ತೊಗೊಂಡು ಕಲ್ಲು ಬೀರಬೇಕು ಇಲ್ಲಾ ಕೋಲಿನಿಂದ ಬಡೀಬೇಕು. ನಾನೂ ಯಾರಿಗೂ ಕೇರ್ ಮಾಡಲ್ಲ, ನನ್ನ ಪಾಡಿಗೆ ನನ್ನ ಕೆಲಸ ನಿಭಾಯಿಸ್ಕೊಂಡು ಹೋಗ್ತೀನೀ ಅನ್ನೋರ್ಗೆ ಕೊನೆಗೆ ಸಿಕ್ಕೋದು ಈ ಕಾಲ್ದಲ್ಲಿ ಚಿಕ್ಕನಾಯಕನಹಳ್ಳಿ ತೆಂಗಿನ ಚಿಪ್ಪು.

ಸಾಧಾರಣವಾಗಿ ಪದೇ ಪದೇ ಪ್ರಮೋಶನ್ ಗಿಟ್ಟಿಸೋ ಕುಳಗಳು ಅನುಸರಿಸೋ ಕೆಲವು ರೂಲ್ಸ್ ಕೆಳಗೆ ಕೊಟ್ಟಿದೀನಿ. ನೀವೂ ಟ್ರೈ ಮಾಡ್ ನೋಡಿ;

ಯಾವಾಗ್ಲೂ ನಿಮ್ಮ ಟೇಬಲ್ನ ಖಾಲೀ ಇಟ್ಟಿರಬೇಡಿ. ಕೆಲಸ ಇದೆಯೋ ಇಲ್ವೋ ಟೇಬ್ಲ್ ಅಂತೂ ಫುಲ್ ಆಗಿರಲಿ. ಬೇಕಾದ್ದು, ಬೇಡದ್ದು ಎಲ್ಲಾ ಫೈಲ್ಗೂ, ಪೇಪರ್ಗೂ ಟೇಬಲ್ಮೇಲೆ ಬಿದ್ದಿರಲಿ. ಇದರಿಂದ ನಿಂಗೇನು ಲುಕ್ಸಾನಿಲ್ಲವಲ್ಲ. ಅದರ್ಪಾಡಿಗೆ ಅದು ಬಿದ್ದಿರುತ್ತೆ. ಟೇಬಲ್ ಖಾಲೀ ಬಿಟ್ಟರೆ ನಿಮ್ಮ ಬಾಸ್ 'ಓಹೋ ಇವನಿಗೆ ಕೆಲಸ ಕಮ್ಮಿಂ'ತ ಇನ್ನೊಂದಿಷ್ಟು ಹೊಸ ಫೈಲ್ಸ್ ತಳ್ಳಿಬಿಟ್ಟಾರು ನಿಮ್ಮ ಟೇಬಲ್ಗೆ. ಆವಾಗಾವಾಗ ಲೈಬ್ರರೀಗೆ ಹೋಗಿ ಬುಕ್ಸ್ ತಂದು, ಅವಕ್ಕೆ ಅಲಲ್ಲಿ ಪೇಜ್ ಮಾರ್ಕರ್ಸ್ ಇಟ್ಟು ನೆಲದ ಮೇಲೆಲ್ಲ ಹರಡಿ, ನೋಡ್ದೋರು 'ಇವನು ಎಷ್ಟು ಸ್ಟಡಿ ಅಸ್ಸೂ, ಎಷ್ಟು ರೆಫರೆನ್ಸ್ ಮಾಡ್ತಾನೆ' ಅಂತ ಮೂಗಿನ್ಮೇಲೆ ಬೆರಳಿಟ್ಟುಕೊಳ್ಳಬೇಕು, ಹಾಗಿರಬೇಕು ನಿಮ್ಮ ವರ್ಕ್ಸ್ಟೇಷನ್.

ನೀವು ಸೀಟಿನಲ್ಲಿರದಿದ್ದಾಗ ನಿಮ್ಮ ಟೋಪಿನೋ ಇಲ್ಲಾ ಕೋಟೋ ಕುರ್ಚಿ ಮೇಲಿರಲಿ. ನೀವು ಕೆಲಸಕ್ಕೆ ಹಾಜರಾಗಿದ್ದೀರೀಂತ ಏನಾರಾ ಪ್ರೂಫ್ ಬೇಕಲ್ವಾ, ಇಲ್ಲದಿದ್ರೆ ನಿಮ್ಮ ಫ್ರೆಂಡ್ಸ್ ನಿಮ್ಮ ಬಾಸ್ಗೆ ಸಾರ್ ಅವರಿನ್ನೂ ಬಂದಿಲ್ಲಾಂತ ಕಾಣುತ್ತೆ ಸಾರ್ ಅಂತ ವರದಿ ಒಪ್ಪಿಸ್‌ಬಿಡ್ತಾರೆ.

ಕೆಲಸ ಸುತರಾಂ ಇಲ್ಲದಿದ್ದಾಗ ಮೂರೂ ಹೊತ್ತೂ ನಿಮ್ಮ ಕುರ್ಚೀಲೇ ಕೂತಿರಕ್ಕಾಗಲ್ಲ. ಒಪ್ಕೊಂಡೆ. ಹಾಗೇಂತ ಅಲ್ಲೀ ಇಲ್ಲೀ ತಿರುಗಾಡ್ವಾಗ ಸ್ವಲ್ಪ ಎಚ್ಚರಿಕೆ, ನಿಗಾ ಇಟ್ಕೊಳ್ಳೋದು ಒಳ್ಳೇದು. ಯಾವಾಗ್ಲೂ ಬರೀಕೈಲಿ ತಿರುಗಾಡ್ಬೇಡಿ. ನೋಡ್ದೋರು ನೀವು ಕಾಫೀಗೆ ಹೋಗ್ತಿದ್ದೀರಾಂತ ಅನ್ಕೊಳ್ತಾರೆ.

ಅಂದ್ಕೊಂಡ್ ತಮ್ಮ ಪಾಡಿಗೆ ಸುಮ್ಮನಿರಲ್ಲ. ನಿಮ್ಮ ಬಾಸ್ ಕಿವೂಲೂ ಸಮಯ ನೋಡ್ಕೊಂಡು•ಊದ್ತ್ತಾರೆ ''ಸಾರ್ ಆಗ್ಲೆ ಕಾಫೀಗೆ ಹೋಗಿದ್ ಹಾಗಿತ್ತೂ ಸಾರ್. ಇನ್ನೂ ಬಂದಂಗೆ ಕಾಣ್ಲಿಲ್ಲಾ ಸಾರ್'' ಅಂತ. ಎಲ್ಲಾ ಬಾಸ್‌ಗಳ್ದೂ ಹಿತ್ತಾಳೇ ಕಿವೀನೆ. ಚಾಡೀ ಮಾತಂದ್ರೆ ಅವರಿಗೆ ಬಹಳ ಇಷ್ಟ. ಚಾಡೀ ಮಾತ್ ಕೇಳ್ದೇ ಇರೋ ಬಾಸ್ ಹಿಂದೆ ಹುಟ್ಟಿರಲಿಲ್ಲ. ಮುಂದೆ ಹುಟ್ಟೋದಿಲ್ಲ. ನ್ಯೂಸ್ ಪೇಪರ್ ಕೈಲಿ ಹಿಡಿದು ಓಡಾಡ್ಲೇ ಕೂಡ್ದು. ಇದು ಬಹಳ ಡೇಂಜರಸ್. ''ನೋಡೋ ಹೊರಟ ಟಾಯ್ಲೆಟ್ಗೆ. ಇನ್ನು ಅಲ್ಲೇ ಅರ್ಧ ಘಂಟೆ ಠಿಕಾಣಿ ಇವಂದು'' ಅನ್ನೋದು ಗ್ಯಾರಂಟಿ.

ಅಡ್ಡಾಡ್ವಾಗ ಎರಡೂ ಕೈಲಿ ಯಾವ್ದೋ ಪೇಪರ್ರೋ ಇಲ್ಲಾ ಫೈಲೋ ಹಿಡ್ಕೊಂಡು ಸೀರಿಅಸ್ ಆಗಿ ಹೋಗ್ತಾ ಇರಿ. ನೋಡ್ದೋರು ''ಓಹೋ ಇವನು ಯಾವ್ದೋ ಇಂಪಾರ್ಟೆಂಟ್ ಕೆಲಸ ಹಿಡಿದಿದ್ದಾನೆ. ಇನ್ನು ಬಾಸ್ನ ಇವನು ಇಂಪ್ರೆಸ್ಸ್ ಮಾಡೋದು ಗ್ಯಾರಂಟಿ'' ಅಂತ ಕರುಬಬೇಕು, ಹಾಗೆ ಹಿಡಿದಿರಬೇಕ್ ಆ ಪೇಪರ್ ಯಾ ಫೈಲ್ನ.

ಈಗೀಗ ಕಂಪ್ಯೂಟರ್ ಇಲ್ಲದ ಟೇಬಲ್ಗಳೇ ಇಲ್ಲ ಆಫೀಸ್ಗಳಲ್ಲಿ. ಜೊತೆಗೆ ಇ ಮೈಲ್ ಬೇರೇ ಕೊಟ್ಟಿರ್ತಾರೆ. ಎಂದೆಂದಿಗೂ ನಿಮ್ಮ ಕಂಪ್ಯೂಟರ್‌ನ ಅದರ ಮುಸುಕು ಹಾಕಿ ಮಲಗಿಸಿರಬೇಡಿ. ಅದು ಯಾವಾಗ್ಲೂ ಚಾಲೂ ಇರಲಿ. ಕೀ ಬೋರ್ಡ್ ಮೇಲೆ ಕೈ ಆಡ್ತಾನೇ ಇರ್ಲಿ. ಬೇಜಾರಾದ್ರೆ ನಿಮ್ಮ ರಿಲೇಷನ್ಸ್ಗೇ ಇಲ್ಲಾ ಫ್ರೆಂಡ್ಸ್ಗೇ ಮೈಲ್ ಕಳಿಸ್ತಾ ಇರಿ. ನಿಮ್ಮ ಬಾಸ್ ಕೈಲಿ ಸಿಕ್ಕಿಹಾಕಿಕೊಂಡ್ರೆ ಒಂದು ಥರ ದೇಶಾವರೀ ನಗು ಕೊಟ್ಟು ''ಸಾರ್ ನಿಮ್ಮ ಹತ್ರಾನೇ ಬರೋಣಾಂತ ಇದ್ದೆ. ನೀವು ಬೆಳಗಿನಿಂದ ಬಹಳ ಬಿಸೀಲಿದ್ರಿ. ನಾನೊಂದು ಹೊಸಾ ಸಾಫ್ಟ್‌ವೇರ್ ಟ್ರೈಮಾಡ್ತಿದ್ದೀನಿ. ಇದಕ್ಕೇ ಹೊರಗೆ ಟ್ರೈನಿಂಗ್ಗೆ ಹೋದರೆ ನಂ ಕಂಪೆನೀಗೆ ಸಾವಿರಾರು ರೂಪಾಯಿ ಖರ್ಚಾಗುತ್ತೆ. ಅದಕ್ಕೇ ನಾನೇ ಇನ್ನೋವೇಟಿವ್ ಆಗಿ ಇದನ್ನ ಸಾಲ್ವ್ ಮಾಡ್ತಿದೀನಿ. ನಾನು ಕಲಿತು ಎಲ್ಲಾರಿಗೂ ಇದನ್ನ ಹೇಳ್ಕೊಡೋಣಾಂತ'' ಅಂತ ಹೇಳ್ತಾ ಹೇಳ್ತಾ ನಿಮ್ಮ ಬಾಸ್ಗೆ ನಿಮ್ಮ ಚೇರ್ ಬಿಟ್ಟುಕೊಟ್ಟು ಇನ್ನೊಂದು ಚೇರ್ ಎಳಕೊಂಬಂದು ನಿಮಗೆ ಗೊತ್ತಿರೋ ಕಂಪ್ಯೂಟರ್ ಟರ್ಮಿನಾಲಜೀನೆಲ್ಲಾ ಉಪಯೋಗಿಸ್ತಾ ''ಸಾರ್ ಈ ಸಿಸ್ಟಂ ಅಲ್ಲಿ ಈ ಥರ ಇನ್ಫರ್ಮೇಷನ್ ಕೊಲೇಟ್ ಮಾಡ್ಬೋದು ಸಾರ್'' ಅಂತ ಹೇಳಕ್ ಶುರು ಹಚ್ಚಿದ್ರೆ ನಿಮ್ಮ ಬಾಸ್ ''ನೋಡೀ ಮಿಸ್ಟರ್ ಇವರೆ, ಇದು ತುಂಬಾ Use ಫುಲ್ ಇರೋಹಾಗೆ ಕಾಣ್ಸುತ್ತೆ. ನೀವು ಚೆನ್ನಾಗಿ ಪ್ರಾಕ್ಟೀಸ್ ಮಾಡ್ಕೊಳ್ಳಿ. ನನಗೆ ಅರ್ಜೆಂಟ್ ಮೀಟಿಂಗ್ ಇದೆ. ಅದನ್ನ ಮುಗಿಸ್ಕೊಂಡು ಬರ್ತೀನೀ'' ಅಂತ ಹೇಳ್ಕೊಂಡು

ಗಾಳದಿಂದ ತಪ್ಪಿಸ್ಕೊಂಡ ಮೀನಿನ ಥರ ಓಡಿ ಹೋಗ್ಗಿದ್ರೆ ನನ್ನ ಹೆಸರ್ ಬೇರೆ. ಆಮೇಲೆ ಆತ ನಿಮ್ಮ ಕ್ಯೂಬಿಕಲ್ ಹತ್ತಿರ ಸುಳಿಯೋದೇ ಇಲ್ಲ. ನೀವು ನಿರಾತಂಕವಾಗಿ ನಿಮ್ಮ ಪರ್ಸನಲ್ ಕೆಲಸ ಮಾಡ್ಕೋಬೋದು.

ಬಾಸ್ಗೆ ಆವಾಗಾವಾಗಾ ಇ ಮೈಲ್ ಕಳಿಸ್ತಾನೇಯಿರಿ. ಬೆಳಿಗ್ಗೆ 7ಕ್ಕೆ ರಾತ್ರಿ 11ಕ್ಕೆ, ರಜಾದಿನ, ಹೀಗೆ ಹೊತ್ತಲ್ಲದ ಹೊತ್ತಲ್ಲಿ. ಅವರಿಗೂ ಗೊತ್ತಾಗ ಬೇಡ್ವೇ ನೀವೂ ರಾತ್ರೀ ಹಗಲೂ ಕೆಲಸ ಮಾಡ್ತಿದ್ದೀರಂತ? ನಾಳೆ ನಿಮ್ಮ ಪ್ರೊಮೊಶನ್ ರೆಕಮಂಡ್ ಮಾಡೋಕೆ ಅವರಿಗೂ ದಾಖಲೇ ಬೇಡ್ವ ನೀವು ಹಾರ್ಡ್ ವರ್ಕರ್ ಅಂತ ಪ್ರೂ ಮಾಡೋಕೆ?

ಸಂಜೆ ಬಾಸ್ ಮನೆಗೆ ಹೋಗೋಕ್ಮುಂಚೆ ನೀವು ಮನೇಗೆ ಹೋಗ್ಲೇ ಕೂಡ್ದು. ನೀವು ಲೇಟಾಗಿ ಕೆಲಸ ಮಾಡ್ತಿದ್ದೀರಂತ ಅವರಿಗೂ ಗೊತ್ತಾಗ್ಬೇಡ್ವಾ? ಅದಕ್ಕೇ ಅವರ ಕಾಬಿನ್ ಮುಂದೆ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಠಳಾಯಿಸ್ತಿರಿ, ಅವರ ಕಣ್ಣಿಗೆ ಬೀಳೋವರ್ಗೂನು. ಸ್ವಾಮೀ, ಈಗಿನ್ ಕಾಲ್ದಲ್ಲಿ ಬಾಸ್‌ಗಳಿಗೆ ಬೇಕಾದ್ದು ಕ್ವಾಲಿಟಿ ಅಲ್ಲಾ ಸಾರ್, ಕ್ವಾನ್ಟಿಟಿ. ಕ್ವಾನ್ಟಿಟಿ. ಅದಕ್ಕೇ ಅಲ್ವೆ ಹಿಂದಿನ ಕಾಲದಲ್ಲಿ ತಾಪೇದಾರೀ ಮಾಡೋರು ಸಂಜೆ ಸಾಹೇಬ್ರು ಮನೆಗೆ ಹೋದ್ಮೇಲೆ ಇವರ್‌ಗಳೂನೂ ತಮ್ಮ ತಮ್ಮ ಸೈಕಲ್‌ಗಳನ್ನ ತುಳ್ಕೊಂಡು ಹೋಗಿ ಸಾಹೇಬರ ಮನೆ ಮುಂದೆ ನಿಂತಿರ್ತಿದ್ದು.

ಅಲ್ಲಿ ಅಮ್ಮೋರು ಏನಾರ ಕೆಲಸ ಕೊಟ್ರೆ ಅದನ್ನ ಲಗುಬಗೆ ಇಂದ ಮಾಡ್ತಿದ್ರು. ಹಿಂದಿನ ಕಾಲದಾಗೆ ಸಾಹೇಬ್ರುಗ್ಳು ದೊಡ್ಡ ದೊಡ್ಡ ಬಂಗ್ಲಾಳಗಳಲ್ಲಿ ಇರ್ತಿದ್ರು. ಅವರ ಮನೆ ಮುಂದೆ ಕೂತ್ಕೊಳ್ಳುಕ್ಕೆ ಇಲ್ಲಾ ನಿಂತ್ಕೊಳ್ಳುಕ್ಕೆ ಜಾಗಾ ಇರ್ತಿತ್ತು. ಆದರೆ ಈಗಿನ್ಕಾಲದ ಬಾಸ್‌ಗಳು ಬಹುತೇಕ ಇರೋದು ಫ್ಲಾಟ್‌ಗಳಲ್ಲಿ. ಅಲ್ಲಿಗೆ ಹೋದ್ರೆ ಎಲ್ಲಿ ಕೂತ್ಕೊಳ್ಳೋದು ಎಲ್ಲಿ ನಿಂತ್ಕೊಳ್ಳೋದು? ಅದಕ್ಕೇ ಈಗೀಗ ಜನ ಬಾಸ್ಗಳ ಮನೇಗೆ ಹೋಗೋದು ಕಮ್ಮಿ. ಹಿಂದಿನೋರು ಸಾಹೇಬ್ರುಗಳ ಮನೇಲಿ ಮಾಡ್ತಿದ್ದ ನಾಟಕ ಇಂದಿನೋರು ಆಫಿಸ್ ಕಾರಿಡಾರ್ಗಳಲ್ಲೇ ಆಡ್ತಾರೆ. ನಾಟ್ಕ ಹಳೇದೇ. Stage and actors ಮಾತ್ರ ಈಗಿನ್ಕಾಲ್ದೋರ್ದು. ಅಷ್ಟೇ ವ್ಯತ್ಯಾಸ.

ಬಹಳ ಹಿಂದೆ ನಮ್ಮನ್ನಾಳುತ್ತಿದ್ದ ದೊಡ್ಡ ಅಧಿಕಾರಿಯೊಬ್ಬರು ಸಂಜೆ ಮನೆಗೆ ಬಂದಮೇಲೆ ಒಂದು ಶಾಲು ಹೊದ್ದು ತಮ್ಮ ಭಾರ್ಯೆಯಜೊತೆ ತಮ್ಮ ಬಂಗ್ಲಾದ ತೋಟದಲ್ಲಿ ತಿರುಗಾಡುತ್ತಿದ್ದರಂತೆ. ಅವರ ಹಿಂದೆ respectable ದೂರದಲ್ಲಿ ಪ್ರಮೋಶನಾಕಾಂಕ್ಷಿಗಳು, ಉದ್ಯೋಗಾಭರ್ಥಿಗಳೂ ಗುಂಪುಗೂಡಿ ನಿಧಾನವಾಗಿ

ಚಲಿಸುತ್ತಿದ್ದರಂತೆ. ಸಾಹೇಬರು ಯಾವಾಗಾದರೊಂದು ಸಲ ತಿರುಗಿ ನೋಡಿದಾಗ ಕಣ್ಣಿಗೆ ಬೀಳುವವನನ್ನು ಕರೆದು ಅವನ ಅರಿಕೆ ಕೇಳಿ ಕೆಲಸ ಮಾಡಿಸಿಕೊಡುತ್ತಿದ್ದರಂತೆ. ಎಷ್ಟು ಸುಲಭವಾಗಿತ್ತು ನೋಡಿ ಅಂದಿನ ದಿನಗಳಲ್ಲಿ ಪ್ರೊಮೋಶನ್ ಗಿಟ್ಟಿಸೋದು!

ಮನೇಗೆ ಹೋಗ್ವಾಗ ಕೈ ತುಂಬಾ ಫೈಲ್ಸ್ ಇರಲಿ. ನೋಡ್ದೋರು "ಇದೇನೋ ಆಗ್ಲೇ ಇಷ್ಟು ಹೊತ್ತಾಯ್ತು. ಮನೇಗೇ ಹೋಂ ವರ್ಕ್ ಬೇರೇ ತೊಗೊಂಡು ಹೋಗ್ತಿದ್ದೀಯಾ. ಅಮ್ಮೋರು ಸುಮ್ಮನಿರ್ತಾರ" ಅಂತ ಕೇಳಿದ್ರೇ ಬಾರ್ಲಿ ಸಿಕ್ಸರ್ರ್ರೊ. ಬಿಡಬೇಡಿ. "ಅಯ್ಯೋ ಅದೊಂದು ದೊಡ್ಡ ಕಥೆ. ಅವಳು ಹೇಳೋದು ನಾನು ಮದುವೆ ಮಾಡ್ಕೊಂಡಿರೋದು ಅವಳನ್ನಲ್ಲವಂತೆ. ನನ್ನ ಕೆಲಸಾನಂತೆ." ಏನು ಇಷ್ಟು ಬೇಗ್ಬಂದ್ರೀ. ಇನ್ನೂ ಸ್ವಲ್ಪ ಹೊತು ಇರಬಹುದಾಗಿತ್ತಲ್ಲಾ ಅಲ್ಲೆ. ನೀವು ಬೆಳಿಗ್ಗೇ ವರ್ರೂನೂ ಬರದಿದ್ರೆ ನಮ್ಮ ಮಗನ ಕೈಲಿ ಅಲ್ಲಿಗೇ ನಿಮ್ಮ ನಾಷ್ಟಾ, ಕಾಫೀ ಕಳಿಸೋಣಾಂತಿದ್ದೆ ಅಂತಾಳಯ್ಯಾ. I just don't know how to balance both - family and office work" ಅಂತ ಹೇಳ್ಕೊಂಡು ದೊಡ್ಡದಾಗಿ ನಿಟ್ಟುಸಿರು ಬಿಡಿ. it is bound to have a terrific impact. ಅಂದಹಾಗೆ ಮನೇಲಿ ನೀವು ನಿಮ್ಮ ಫೈಲ್ಸ್ ಎಲ್ಲಾ ಒಂದು ಕಡೆ ಬಿಸಾಕಿ ನಿಮ್ಮ ಅಮ್ಮೋರ್ ಜೊತೆ ಲೇಟ್ ನೈಟ್ ಮೂವೀನ ಟಿ. ವೀಲಿ ನೊಡೋದ್ನ ನಿಮ್ಮ ಆಫೀಸ್ನೋರು ಬಂದು ನೋಡ್ತಾರಾ? ಧೈರ್ಯ ವಾಗಿರಿ.

ಅದ್ಸರೀ ನಿಮ್ಮ ಪ್ರೊಮೋಶನ್ ಪಾರ್ಟೀ ಇಲ್ಲಿಟ್ಟುಕೊಳ್ತೀರ? ಫೈವ್ ಸ್ಟಾರ್ ಹೋಟಲ್ ತಾನೆ? ಆ ಬೂಜ್ ಪಾರ್ಟಿಗೆ ನನ್ನೂ ಕರೆಯೋದು ಮರೀಬೇಡಿ ಸಾರ್.

ಜಂಬಲ್ಸ್ - ಸರಿಯುತ್ತರ

ಪುನುಗಿನ ಬೆಕ್ಕು


ಹರಿದ ಪಂಚೆ

ಕಾಲು ಹಿಡಿ

ಬೆಪ್ಪು ತಕ್ಕಡಿ

ಬೆದರಿಕೆ ಪತ್ರ

ಪಂಡಿತ ಪುತ್ರ



Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003.
PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010
Editor : M. SHIVAKUMAR